# ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ:
# ಕನ್ನಡವೇ ಸತ್ಯ, ಕನ್ನಡವೇ ನಿತ್ಯ

ವಿದ್ಯೆಯ ಸೃಷ್ಟಿ ಕನ್ನಡ ವಿಶ್ವವಿದ್ಯಾಲಯದ ಒಂದು ಪ್ರಮುಖ ಉದ್ದೇಶ. ವಿಶ್ವದ ಜ್ಞಾನವನ್ನು ಕನ್ನಡಿಗರಿಗೆ ಮುಟ್ಟಿಸುವ ಕನ್ನಡ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸುವ ಮಹತ್ವದ ಹೊಣೆಗಾರಿಕೆ ಕನ್ನಡ ವಿಶ್ವವಿದ್ಯಾಲಯಕ್ಕಿದೆ. ವಿದ್ಯೆಯ ಸೃಷ್ಟಿ ಮತ್ತು ಪ್ರಸರಣ ಎಂದರೆ ಅದು ಕೇವಲ ವಿಶ್ವವಿದ್ಯಾಲಯದಲ್ಲಿರುವ ಅಧ್ಯಾಪಕರಿಂದ ಮಾತ್ರ ಎಂಬ ಹಮ್ಮು ನಮ್ಮದಲ್ಲ. ಇಲ್ಲಿನ ವಿವಿಧ ವಿಭಾಗಗಳ ಒಳಗಿನ ಪ್ರತಿಭಾವಂತರ ಜೊತೆಗೆ ಕರ್ನಾಟಕದ ಎಲ್ಲ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾ ಸಂಪನ್ನತೆಯನ್ನು ಬೆಸೆಯುವ ಕೊಂಡಿಯಂತೆ ಪ್ರತಿಯೊಂದು ವಿಭಾಗವೂ ಕೆಲಸ ಮಾಡುತ್ತದೆ. ಈ ಸುಂದರ ಬೆಸುಗೆ ಹೊಸ ಜ್ಞಾನದ ಸೃಷ್ಟಿಗೆ ಹಾಗೆಯೇ ಅರ್ಥಪೂರ್ಣ ಮೌಲ್ಯಗಳ ಪುನರ್ ಸ್ಥಾಪನೆಗೆ ಕಾರಣವಾಗಿದೆ. ವಿದ್ಯೆಯ ಸೃಷ್ಟಿಗೆ ಪೂರಕವಾದ ಹಲವು ಬಗೆಯ ಜ್ಞಾನವಾಹಿನಿಗಳ ತಿಳುವಳಿಕೆ ವಿಶ್ವವಿದ್ಯಾಲಯದ ಒಳಗೆ ರೂಪುಗೊಳ್ಳುತ್ತಿದೆ. ಕನ್ನಡ ಸಂಶೋಧನೆಯ ವಿಧಿವಿಧಾನಗಳನ್ನು ಸೃಷ್ಟಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಇವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನೇಕ ಕಮ್ಮಟ, ತರಬೇತಿ ಮುಂತಾದಂತೆ ಹತ್ತಾರು ಶಿಬಿರಗಳು ಇಲ್ಲಿ ನಡೆಯುತ್ತಿವೆ. ಈ ಎಲ್ಲ ಕುಲುಮೆಗಳಲ್ಲಿ ಪಕ್ವಗೊಂಡ ಜ್ಞಾನ ಪುಸ್ತಕದ ರೂಪದಲ್ಲಿ ಪ್ರಸಾರಾಂಗದ ಮೂಲಕ ಆಕಾರ ಪಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಜನಸಾಮಾನ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧಕರನ್ನು ತನ್ನ ಗುರಿಯನ್ನಾಗಿಟ್ಟುಕೊಂಡು ಹಲವು ಬಗೆಯ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದೆ. ಜನಸಾಮಾನ್ಯರ ತಿಳುವಳಿಕೆಗಾಗಿ ನವಸಾಕ್ಷರ ಮಾಲೆ ಮತ್ತು ಮಂಟಪ ಮಾಲೆ ಎಂಬ ಪುಸ್ತಕಗಳು, ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು, ಸಂಶೋಧಕರಿಗೆ ಹಲವು ಬಗೆಯ ವಿಶ್ವಕೋಶಗಳು ಮುಂತಾದಂತೆ ವೈವಿಧ್ಯಮಯ ಜ್ಞಾನ ಸೃಷ್ಟಿ ಇಲ್ಲಿ ನಡೆಯುತ್ತಿದೆ. ಇವೆಲ್ಲವನ್ನೂ ಮೀರಿ ಮತ್ತೊಂದು ಗುರಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇದೆ. ಅದೇನೆಂದರೆ ಕನ್ನಡ ಸಂಸ್ಕೃತಿಯ ಆಮೂಲಾಗ್ರ ಶೋಧ ನಡೆಸುವ ಮೂಲಕ ದೇಸಿ ಚಿಂತನಾಕ್ರಮ ವೊಂದನ್ನು ರೂಪಿಸುವುದು. ಭಾರತೀಯ ಸಂಸ್ಕೃತಿ ಎಂದು ಏಕಮುಖವಾಗಿ ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರಬಂದು ಪ್ರತಿಯೊಂದು ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆಯೆಂಬ ವಾಸ್ತವವಾದ ನೆಲೆಯಲ್ಲಿ ಕನ್ನಡ ನೆಲದ ಗುಣ ಹುಡುಕುವ ಕಾರ್ಯದಲ್ಲಿ ನಾವು ಈಗ ಮಗ್ನರಾಗಿದ್ದೇವೆ. ಆ ಮೂಲಕ ನಿರ್ಲಕ್ಷಿಸಲ್ಪಟ್ಟ ಕ್ಷೇತ್ರಗಳನ್ನು ಪ್ರಧಾನ ನೆಲೆಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ದೇಶದ ಅಥವಾ ನಾಡಿನ ಅಂಚಿನ ಜನಕ್ಕೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆಯೆಂದು, ಆ ಸಂಸ್ಕೃತಿಗೆ ತನ್ನದೇ ವಿಶಿಷ್ಟ ಪರಂಪರೆಯಿದೆಯೆಂದು, ಆ ಪರಂಪರೆಯೇ ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆಯೆಂದು ಸ್ಪಷ್ಟ ಮಾತುಗಳಿಂದ ನಿರ್ವಚಿಸಬೇಕಾದ ಕಾಲವೊಂದು ಈಗ ಬಂದಿವೆ. ಆ ಮೂಲಕ ಕನ್ನಡ ನಾಡಿನ ಸರ್ವತೋಮುಖ ಬೆಳವಣಿಗೆಯನ್ನು ಯಾವ ಯಾವ ದಿಸೆಯಲ್ಲಿ ಸಾಧಿಸಬೇಕೆಂಬ ದೂರದೃಷ್ಟಿ ಮತ್ತು ಆಶಾವಾದ ಕೂಡ ನಮ್ಮ ಅಧ್ಯಯನಗಳ ಹಿಂದೆ ಇದೆ.

ಒಂದು ಕಡೆಯಿಂಧ ವಸಾಹತುಶಾಹಿ ಧೋರಣೆಯ ಪಾಶ್ಚಾತ್ಯ ಪ್ರಭಾವ, ಮತ್ತೊಂದು ಕಡೆ ವೈದಿಕಶಾಹಿಗಳ ವೈಭವೀಕರಣ ಇವುಗಳಿಂದ ಆವರಿಸಿದ ವಿಸ್ಮೃತಿಯಿಂದ ಬಿಡುಗಡೆಗೊಳ್ಳುವ ಮೂಲಕ ಕನ್ನಡ ಸಂಸ್ಕೃತಿಯೊಂದನ್ನು ಪ್ರತಿಷ್ಠಾಪಿಸುವ ಕೆಲಸ ಆಗಬೇಕಾಗಿದೆ. ಇಂದಿನ ಜಾಗತೀಕರಣ, ಕೋಮುವಾದ ಹಾಗೂ ಹಿಂಸೆಯ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟು ಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ. ಒಟ್ಟಾರೆಯಾಗಿ ಆಲೋಚನೆಗಳ ಮತ್ತು ಸಿದ್ಧಾಂತಗಳ ಮೌಲ್ಯೀಕರಣದ ಅಗತ್ಯವನ್ನು ಮನಗಂಡಿರುವ ಕನ್ನಡ ವಿಶ್ವವಿದ್ಯಾಲಯ ದೇಸಿ ಮತ್ತು ಸಾಂಪ್ರದಾಯಿಕ ಮೌಲ್ಯಗಳ ನಡುವೆ ಮುಖಾಮುಖಿಯೊಂದನ್ನು ಹುಟ್ಟು ಹಾಕುವ ಮೂಲಕ ಸತ್ಯದ ಬೆಳಕಿನೆಡೆಗೆ ಕೊಂಡೊಯ್ಯುವ ಕೆಲಸವನ್ನು ಮಾಡುತ್ತಿದೆಯೆಂಬ ಆಶಯ ನಮ್ಮದಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ.

'ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಪ್ರೊ.ನಾ. ಗೀತಾಚಾರ್ಯ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಹಿ.ಚಿ. ಬೋರಲಿಂಗಯ್ಯ**
ಕುಲಪತಿ

(೧)

**೧. ಪ್ರವೇಶ**

ಈ ಕಿರುಗ್ರಂಥದಲ್ಲಿ ೯೦ರ ದಶಕದಿಂದೀಚೆಗೆ ಶೋಧನೆ ಗೊಂಡಿರುವ ಶ್ರೀವೈಷ್ಣವ ಹರಿದಾಸ ಸಾಹಿತ್ಯದ ಸ್ವರೂಪವನ್ನು ಸಮೀಕ್ಷೆ ಮಾಡಲಾಗಿದೆ. 'ಶ್ರೀವೈಷ್ಣವ' ಎನ್ನುವುದು ವೈದಿಕಧರ್ಮದ ಒಂದು ಶಾಖೆಯಾದ 'ವಿಶಿಷ್ಟಾದ್ವೈತ' ತತ್ವದ ಪರ್ಯಾಯನಾಮ, ಭಗವಾನ್ ರಾಮಾನುಜಾಚಾರ್ಯರು ಸ್ಥಾಪಿಸಿದ ಈ ಧರ್ಮ ಕರ್ನಾಟಕದಲ್ಲಿ ೧೧ನೇ ಶತಮಾನದಿಂದಲೇ ಅಸ್ತಿತ್ವದಲ್ಲಿದೆ. ಹಲವು ಬಾರಿ 'ರಾಜಧರ್ಮ'ವೂ ಆಗಿ ಬೆಳೆದಿದೆ. ದ್ವೈತ - ಅದ್ವೈತಗಳಲ್ಲಿ ಕನ್ನಡದಲ್ಲಿ ಸಾಹಿತ್ಯ ಕಾಣಿಸಿಕೊಂಡಂತೆ 'ವಿಶಿಷ್ಟಾದ್ವೈತದಲ್ಲಿ ಸಾಹಿತ್ಯ ಸೃಷ್ಟಿಯಾಗಲೇ ಇಲ್ಲ' ಎಂಬ ಅಭಿಪ್ರಾಯವೇ ೯೦ ರ ದಶಕದವರೆಗೆ ಕನ್ನಡ ಸಾಹಿತ್ಯವಲಯದಲ್ಲಿ ಇತ್ತು. ೯೦ರ ದಶಕದಲ್ಲಿ ನಡೆದ ಸಂಶೋಧನೆಗಳಿಂದ ಅದು ಬದಲಾಗಿದೆ. ಈವರೆಗೆ ಈ ಕ್ಷೇತ್ರದಲ್ಲಿ ಹತ್ತು ಹಲವು ಬಿಡಿ ಬಿಡಿ ಗ್ರಂಥಗಳು, ಲೇಖನಗಳು ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ತತ್ವದ ಹಾಡುಗಳು ವ್ಯಾಪಕವಾಗಿ ಕಂಡು ಬಂದಿವೆ. ಈಗಾಗಲೇ ಕನ್ನಡ ಸಾಹಿತ್ಯ ಇದಮಿತ್ಥಂ ಎಂದು ನಿರ್ದಿಷ್ಟ ಮತಕ್ಕೆ ಸೇರಿಸದೆ ಚರ್ಚಿಸಿದ್ದ ಲಕ್ಷ್ಮೀಶ ಮತ್ತು ಕನಕದಾಸರು ಈ ವಿಶಿಷ್ಟಾದ್ವೈತ ಸಂಶೋಧನೆಯಿಂದ ವಿಶಿಷ್ಟಾದ್ವೈತ ಮತದಲ್ಲಿ ನಿಲ್ಲುವಂತಾಗಿದ್ದಾರೆ. ೧೫ನೇ ಶತಮಾನದ ಬೇಲೂರು ವೈಕುಂಠದಾಸರಿಂದ ೨೦ನೇ ಶತಮಾನದ ನಾರಾಯಣ ಶರ್ಮರವರೆಗೆ ಈ ತತ್ವದಲ್ಲಿ ಹರಿದಾಸ ಸಾಹಿತ್ಯ ಹಬ್ಬಿದೆ. ೧೯ನೇ ಶತಮಾನದಲ್ಲಿ ತುಳಸಿರಾಮದಾಸರು ಈ ತತ್ವದ ತಳಹದಿಯ ಮೇಲೆ ಸಾಮಾಜಿಕ ಜಾಗೃತಿ ಮೂಡಿಸಲು ಇನ್ನೊಂದು ಹರಿದಾಸ ಆಂದೋಲನವನ್ನೇ ನಡೆಸಿದ್ದು ಇದರ ಪ್ರಭಾವದಿಂದ ಸಮಾಜದ ಎಲ್ಲ ವರ್ಗದ ಜನರೂ ಗೌಡ, ಬಣಜಿಗ, ಗಾಣಿಗ, ಅಕ್ಕಸಾಲಿ, ದಲಿತ ಇತ್ಯಾದಿ - ಎಲ್ಲ ಜಾತಿಯವರೂ ಹರಿದಾಸರಾಗಿ ಕಂಡು ಬಂದಿರುವುದರಿಂದ ಹರಿದಾಸ ಸಾಹಿತ್ಯಕ್ಕಿದ್ದ ಕೇವಲ 'ವೈದಿಕ ಸಾಹಿತ್ಯ' ಎಂಬಮಿತಿ ದೂರವಾಗಿ ಹರಿದಾಸ ಸಾಹಿತ್ಯವೂ ವಚನಸಾಹಿತ್ಯದಂತೆ 'ಜನಪದ ಸಾಹಿತ್ಯ' ಎಂದು ಸಾಬೀತಾಗಿದೆ.

ಹೀಗೆ ಕನ್ನಡ ಸಾಹಿತ್ಯದಲ್ಲಿ ಹಲವಾರು ಪ್ರಮುಖ ಚರ್ಚೆಗಳನ್ನು ಆಹ್ವಾನಿಸುವ, ಈ ವಿಶಿಷ್ಟಾದ್ವೈತ ಸಾಹಿತ್ಯದ ಅಸ್ತಿತ್ವದ ಮೂಲಕ ಒಟ್ಟು ಕನ್ನಡ ಸಾಹಿತ್ಯಚರಿತ್ರೆಯನ್ನೇ ಪುನರ್ಮೌಲ್ಯೀಕರಣಕ್ಕೆ ಒಳಪಡಿಸಬೇಕಾಗಿದೆ. ಇಂತಹಪ್ರಮುಖ ಸಾಹಿತ್ಯವಾಗಿ ಕಂಡು ಬಂದಿರುವ ಶ್ರೀವೈಷ್ಣವ ಹರಿದಾಸ ಸಾಹಿತ್ಯದಲ್ಲಿ ಈವರೆಗೆ ಪ್ರಕಟವಾಗಿರುವ ಹರಿದಾಸರ ಜೀವನ ವಿವರ ಮತ್ತು ಕೀರ್ತನೆಗಳ ಸಮೀಕ್ಷೆಯನ್ನು ಈಗಾಗಲೇ ನಾರಾಯಣಶರ್ಮ ಸಂಸ್ಕೃತಿ ಕೇಂದ್ರದ 'ಶ್ರೀವೈಷ್ಣವ ಹರಿದಾಸ ಸಾಹಿತ್ಯ ಮಾಲೆ' ಯಲ್ಲಿ ಪ್ರಕಟವಾಗಿರುವ ಬಿಡಿಬಿಡಿ ಗ್ರಂಥಗಳಲ್ಲಿ ಮತ್ತು ಸರ್ಕಾರದಿಂದ ಪ್ರಕಟವಾಗಿರುವ 'ಸಮಗ್ರ ದಾಸಸಾಹಿತ್ಯ ಸಂಪುಟ'ಗಳಲ್ಲಿ ಹಾಗೂ

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಶ್ರೀ ವೈಷ್ಣ ಹರಿದಾಸ ಸಾಹಿತ್ಯ' ಪುಸ್ತಕದಲ್ಲಿ ಬಂದಿರುವ ಅಂಶಗಳನ್ನೇ ಇಲ್ಲಿ ಪ್ರಧಾನವಾಗಿ ಬಳಸಿಕೊಂಡಿದ್ದರೂ ಆನಂತರದ ಸಂಶೋಧನೆಯಿಂದ ಬೆಳಕಿಗೆ ಬಂದಿರುವ ಹೊಸವಿಚಾರಗಳನ್ನೂ ಇಲ್ಲಿ ಅಳವಡಿಸಿಕೊಳ್ಳಲಾಗಿದೆ.

ಶ್ರೀವೈಷ್ಣವ - ವಿಶಿಷ್ಟಾದ್ವೈತ ಸಾಹಿತ್ಯವು ಕನ್ನಡ ಓದುಗರಿಗೆ ಹೊಸ ಓದಾಗಿರುವುದರಿಂದ ಅದರ ಪ್ರವೇಶಕ್ಕಾಗಿ ಪ್ರಸ್ತಾವನೆಯ ಮುಂದಿನ ಭಾಗದಲ್ಲಿ ಶ್ರೀವೈಷ್ಣ ತತ್ತ್ವಧರ್ಮದ ಪರಿಚಯ ಹಾಗೂ ಈವರೆಗೆ ಈಕ್ಷೇತ್ರದಲ್ಲಿ ಆಗಿರುವ ಸಂಶೋಧನೆ ಮತ್ತು ಶ್ರೀವೈಷ್ಣವ ಹರಿದಾಸ ಸಾಹಿತ್ಯದ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ.

**೧. ಅನುಭಾವ ಸಾಹಿತ್ಯ**

ಕನ್ನಡ ಸಾಹಿತ್ಯದಲ್ಲಿ ವಚನಸಾಹಿತ್ಯ ಮತ್ತು ಹರಿದಾಸಸಾಹಿತ್ಯಗಳು ಜನಪರ ಸಾಹಿತ್ಯ ಪ್ರಕಾರಗಳಾಗಿ ಕಾಣಿಸಿಕೊಂಡಿರುವ ವಿಶಿಷ್ಟ ಸಾಹಿತ್ಯ ಮಾದರಿಗಳು. ಚಂಪು, ರಗಳೆ, ಷಟ್ಪದಿ, ಸಾಂಗತ್ಯ ಮುಂತಾದ ಸಾಹಿತ್ಯ ಪ್ರಕಾರಗಳು ನಿರ್ದಿಷ್ಟ ವಸ್ತುವನ್ನಿಟ್ಟುಕೊಂಡು ನಿರ್ದಿಷ್ಟ ಮಾಧ್ಯಮದಲ್ಲಿ ದೀರ್ಘಕೃತಿಗಳ ರೂಪದಲ್ಲಿ ಬರೆದಿರುವ ಸಾಹಿತ್ಯವಾದರೆ ವಚನ ಮತ್ತು ಹರಿದಾಸಸಾಹಿತ್ಯ ಇದಕ್ಕೆ ಭಿನ್ನವಾಗಿವೆ. ಸಮಾಜದ ಎಲ್ಲ ವರ್ಗದ ಜನಪ್ರತಿನಿಧಿಗಳೂ ಪಾಲ್ಗೊಂಡು ಸಮಾಜದ ಬದುಕಿನಲ್ಲಿ ದಿನನಿತ್ಯ ತಾವು ಕಾಣುವ 'ಕಾಣ್ಕೆ'ಗಳನ್ನು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತರಾಗಿ ಹೇಳುವ ಮನದಮಾತುಗಳೇ ಇಲ್ಲಿ ಸಾಹಿತ್ಯವಾಗಿ ಹೊರ ಹೊಮ್ಮಿದೆ. ಇದಕ್ಕೆ ಯಾವುದೇ ನಿರ್ದಿಷ್ಟ 'ಬಂಧ'ವಿಲ್ಲ. ಆನೆ ನಡೆದದ್ದೇ ಹಾದಿ ಯೆಂಬಂಥೆ ಇವರು ಬರೆದದ್ದೇ ಸಾಹಿತ್ಯವಾಗಿ ಅದಕ್ಕೆ ನಾವು ಹೆಸರನ್ನು ರೂಪಿಸಿ ಕೊಂಡಿದ್ದೇವೆ. ಇವು ಕ್ರಮವಾಗಿ ೧೨ ಮತ್ತು ೧೫ನೇ ಶತಮಾನಗಳಲ್ಲಿ ಸಮಾಜದಲ್ಲಿ ಒಂದು ಬಗೆಯ 'ಚಳವಳಿ'ಯೋಪಾದಿಯಲ್ಲಿ ಸಾಮಾಜಿಕ ಜಾಗೃತಿಯ ರೂಪವಾಗಿ ಕಾಣಿಸಿಕೊಂಡು, ಜಡಗೊಂಡಿದ್ದ ಜನಪದದಲ್ಲಿ ಚಲನ ಶೀಲತೆಯನ್ನು ತಂದು, ಯಾರುಬೇಕಾದರೂ ಇದರಲ್ಲಿ ತೊಡಗಿಸಿಕೊಳ್ಳುವಂತಹ ಮುಕ್ತವಾತಾವರಣವನ್ನು ಉಂಟುಮಾಡಿ, ಇಡೀ ಸಮಾಜವನ್ನೇ ಸಾಹಿತ್ಯದ ವೇದಿಕೆಯನ್ನಾಗಿ ಮಾಡುವ ಮೂಲಕ 'ಸಾಹಿತ್ಯ' ಎಂಬುದಕ್ಕೆ ಹೊಸವ್ಯಾಖ್ಯಾನವನ್ನೇ ಬರೆದು ನೂತನ ಮಾರ್ಗವನ್ನು ತೆರೆದವು.

ಈ ಹಾದಿಯಲ್ಲಿ ಮುಂದಿನವರು ಚಳವಳಿಯಂತಹ ಸಾಮೂಹಿಕ ಪ್ರಕ್ರಿಯೆಯಲ್ಲಿ ತೊಡಗದಿದ್ದರೂ ಕರ್ನಾಟಕದಾದ್ಯಂತ ಬೇರೆ ಬೇರೆ ಪ್ರದೇಶಗಳಲ್ಲಿ ಈ ಸಾಹಿತ್ಯ ಮಾಧ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ಈ ಪ್ರಕಾರಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ತಮ್ಮ ತಮ್ಮ ವೈಯಕ್ತಿಕ ನೆಲೆಗಳಿಂದಲೇ ಸಮಾಜದ ಮೇಲೆ ಪ್ರಭಾವಬೀರಿ, ಸಾಮಾಜಿಕರಲ್ಲಿ ಬದಲಾವಣೆಯಾಗುವಂತೆ ನೈತಿಕಮೌಲ್ಯ, ಜೀವನನಿಷ್ಠೆಗಳನ್ನು ಉಳಿಸಿಕೊಂಡು ಬರುವಲ್ಲಿ ಬಹಳ ಮುಖ್ಯ ಪಾತ್ರವಹಿಸಿದ್ದಾರೆ. ಇಂದಿಗೂ ಇಂಥವರು ಸಮಾಜದಲ್ಲಿ ಕಾಣಸಿಗುತ್ತಾರೆ. ಜಾತಿ, ಮತ, ಪಂಥಗಳ ಭೇದವಿಲ್ಲದೆ ಎಲ್ಲರೂ ಈ ಸಾಹಿತ್ಯ ಪ್ರಕಾರವನ್ನು ತಮ್ಮ ಅನುಭವಗಳ ಅಭಿವ್ಯಕ್ತಿಗೆ ಬಳಸಿಕೊಳ್ಳುತ್ತಿದ್ದಾರೆ. ಇದರಲ್ಲಿ ಸಮಾಜದಲ್ಲಿರುವ ಎಲ್ಲ ಜಾತಿಯವರೂ ಪಾಲ್ಗೊಳ್ಳುತ್ತಿದ್ದಾರೆ. ಎಲ್ಲಮತಗಳೂ ತೊಡಗಿಕೊಂಡಿವೆ. ಬ್ರಾಹ್ಮಣ, ಲಿಂಗಾಯಿತ, ಗೌಡ, ಬಣಜಿಗ, ಗಾಣಿಗ, ಉಪ್ಪಾರ, ಅಕ್ಕಸಾಲಿ, ದರ್ಜಿ, ದಲಿತ, ಮುಸ್ಲಿಂ ಜಾತಿಗಳವರು ದ್ವೈತ - ಅದ್ವೈತ - ವಿಶಿಷ್ಟಾದ್ವೈತ - ಶಕ್ತಿವಿಶಿಷ್ಟಾದ್ವೈತ - ಭಾಗವತ ಧರ್ಮಗಳ ಮೂಲಕ ಯಾವುದೇ ಭೇದ ಭಾವವಿಲ್ಲದೆ, ಪರಸ್ಪರ ಘರ್ಷಣೆಗೊಳಗಾಗದೆ ತಮ್ಮ ತಮ್ಮ ನೆಲೆಗಳಲ್ಲಿ ಈ ಸಾಹಿತ್ಯವನ್ನು ರೂಪಿಸುವಂತಹ ವಾತಾವರಣವನ್ನೂ 'ಅನುಭಾಗಿ'ಗಳನ್ನೂ ಸೃಷ್ಟಿಸುತ್ತಲೇ ಇದೆ. ಹೀಗಾಗಿ ಇದನ್ನು ಒಟ್ಟಾರೆಯಾಗಿ 'ಅನುಭಾವ ಸಾಹಿತ್ಯ' ಎಂದು ಕರೆಯಬೇಕಾಗುತ್ತದೆ. ಇವರೆಲ್ಲರ ಮುಖ್ಯಗುರಿ ಶುದ್ಧಸಮಾಜದ ನಿರ್ಮಾಣವೇ ಆಗಿದೆ.

ಸಾಮಾಜಿಕ ಮೌಲ್ಯಗಳ ಸ್ಥಿರೀಕರಣ ನೈತಿಕ ಮತ್ತು ಪಾರಮಾರ್ಥಿಕ ಸ್ಥೈರ್ಯಗಳ ಪುನಃ ಸ್ಥಾಪನೆ; ಬದಲಾವಣೆಗೆ ತೆರೆದುಕೊಳ್ಳುವ ಸಮಾಜದಲ್ಲಾಗುವ ಅಸ್ಥಿರತೆಗಳಿಂದ ಜನರಲ್ಲಾಗುವ ತಲ್ಲಣ - ಆತಂಕಗಳಿಂದ ಅವರನ್ನು ವಿಮುಖಗೊಳಿಸಿ ಮತ್ತೆ ಬದುಕಿನತ್ತ ಮುಖಮಾಡಿಸುವ ಜೀವನನಿಷ್ಠೆ; ಬದುಕನ್ನು ಉದಾತ್ತ ಧ್ಯೇಯಗಳತ್ತ ತಿರುಗಿಸುವ ಉನ್ನತ ಆಧ್ಯಾತ್ಮಿಕ ಚಿಂತನೆ ಮುಂತಾದ ಸಮಾಜಪರವಾದ ಜೀವನ ದೃಷ್ಟಿಗಳನ್ನೇ ಕೇಂದ್ರವಾಗಿಟ್ಟುಕೊಂಡು ಸಮಾಜದ ದಿನನಿತ್ಯದ ಬದುಕಿನ ನಿದರ್ಶನಗಳ ಮೂಲಕವೇ

ಉತ್ತಮ ಆದರ್ಶದ ದರ್ಶನ ಮಾಡಿಸುವ ವಿಶಿಷ್ಟ ಚಿಂತನೆಗಳಿಂದ ಕೂಡಿರುವ ಈ ಮಾತುಗಳ ಉದ್ದೇಶ ಒಂದೇ ಆಗಿರುವುದರಿಂದ ಮತ್ತು ಇದರ ಮೂಲಪ್ರೇರಣೆ 'ಅನುಭವ'ವೇ ಆಗಿರುವುದರಿಂದ ಇದು ವಚನವಾಗಿರಲಿ, ಕೀರ್ತನೆಯಾಗಿರಲಿ, ತತ್ವವಾಗಿರಲಿ, ಸಂಪ್ರದಾಯದ ಹಾಡಾಗಿರಲಿ ಇವೆಲ್ಲವೂ 'ಅನುಭಾವ' ಸಾಹಿತ್ಯದ ವ್ಯಾಪ್ತಿಯಲ್ಲಿಯೇ ಬರುತ್ತವೆ. ೧೭ನೇ ಶತಮಾನದಿಂದ ಕಾಣಿಸಿಕೊಂಡಿರುವ ಈ ಸಾಹಿತ್ಯ ಪ್ರಕಾರಗಳನ್ನು 'ಅನಭಾವ ಸಾಹಿತ್ಯ'ದ ವಿಭಾಗದಲ್ಲೇ ಗುರುತಿಸುವುದು ಸೂಕ್ತ. ಏಕೆಂದರೆ ಒಂದೇ ಕಾಲದಲ್ಲಿ ಬೇರೆ ಬೇರೆ ಮತಧರ್ಮಗಳಲ್ಲಿ ಸಮಾಜದ ಬೇರೆ ಬೇರೆ ಜಾತಿ ವರ್ಗಗಳ ಪ್ರತಿನಿಧಿಗಳು ಬೇರೆ ಬೇರೆ ಪ್ರದೇಶಗಳಲ್ಲಿ ಈ ಮೂರು ಪ್ರಕಾರಗಳಲ್ಲೂ ತಮ್ಮ 'ಅನುಭವ'ಗಳನ್ನು ದಾಖಲಿಸುತ್ತಿರುತ್ತಾರೆ. ಆದ್ದರಿಂದ ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅಧ್ಯಯನಕ್ಕೆ ತೊಡಗಿಸುವ ಬದಲು ಒಂದೇ ಧೋರಣೆಯ ಹಿನ್ನೆಲೆಯಲ್ಲಿ 'ಅನುಭಾವ ಸಾಹಿತ್ಯ'ವಾಗಿ ಅಧ್ಯಯನ ಮಾಡುವುದರಿಂದ ಈ ಸಾಹಿತ್ಯದ ಮೌಲ್ಯವನ್ನು ವಿಸ್ತರಿಸಬಹುದಾಗಿದೆ.

೧೭ನೇ ಶತಮಾನದ ನಂತರದ ಕೀರ್ತನೆಗಳು, ಶಿವದಾಸಗೀತೆಗಳು ಮತ್ತು ತತ್ವಪದಗಳು ಹಾಗೂ ಸಂಪ್ರದಾಯದ ಹಾಡುಗಳನ್ನೆಲ್ಲ ಸೇರಿಸಿ ಅಧ್ಯಯನದ ದೃಷ್ಟಿಯಿಂದ 'ಅನುಭವ ಸಾಹಿತ್ಯ' ವಿಭಾಗದಲ್ಲಿ ವಿಶ್ಲೇಷಣೆ ಮಾಡುವುದು ಸೂಕ್ತವಾದರೂ ಅದಕ್ಕೂ ಮುಂಚೆ ಈ ಪ್ರಕಾರಗಳಲ್ಲಿ ದೊರಕುವ ಸಾಹಿತ್ಯ ಎಷ್ಟು ಎಂಬ ಬಗ್ಗೆ ಸ್ಪಷ್ಟ ತಿಳಿವಳಿಕೆ ಹೊಂದಿರಬೇಕು. ಈಚಿನ ದಶಕಗಳಲ್ಲಿ ಈ ಪ್ರಕಾರಗಳಲ್ಲಿ ಅನೇಕ ಕೃತಿಕಾರರ ಬಗ್ಗೆ ಶೋಧಗಳು ನಡೆದಿವೆ. ನಡೆಯುತ್ತಿವೆ. 'ಸಮಗ್ರವಚನ ಸಾಹಿತ್ಯ' ಪ್ರಕಟನೆಯ ಮೂಲಕ ೧೯ನೇ ಶತಮಾನದವರೆಗಿನ ಶರಣರ ಹಾಡುಗಳು ಮತ್ತು ಶೈವತತ್ವಾಧಾರಿತ ತತ್ವಪದಕಾರರ ಬಗ್ಗೆ ಸಾಕಷ್ಟು ಸಾಹಿತ್ಯ ದಾಖಲಾಗಿದೆ. ಈಚೆಗೆ 'ಸಮಗ್ರ ದಾಸ ಸಾಹಿತ್ಯ'ದ ಪ್ರಕಟನೆಯ ಮೂಲಕ ಹರಿದಾಸರ ಕೀರ್ತನೆಗಳೂ ೧೯ನೇ ಶತಮಾನದವರೆಗಿನ ಅವಧಿಯವರೆಗೆ ಸಾಕಷ್ಟು ದಾಖಲಾಗಿದೆ. ಇದರಲ್ಲಿ ವೈದಿಕ ಧರ್ಮದ ಮುಖ್ಯ ತತ್ವಗಳಾದ ಅದ್ವೈತ - ವಿಶಿಷ್ಟಾದ್ವೈತ ಮತ್ತು ದ್ವೈತ ಈ ಮೂರು ಧರ್ಮಗಳಲ್ಲಿ ಹರಿದಾಸರು ಕಾಣಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಮುಖ್ಯವಾಹಿನಿಯಾದ ದ್ವೈತಕ್ಕೆ ಅದ್ವೈತ - ವಿಶಿಷ್ಟಾದ್ವೈತಗಳೂ ಸೇರಿಕೊಂಡು ಹರಿದಾಸ ಸಾಹಿತ್ಯ 'ತ್ರಿವೇಣಿಸಂಗಮ'ವಾಗಿದೆ. ಈ ಸಂಪುಟಗಳಲ್ಲಿರುವ ಸುಮಾರು ೨೦,೦೦೦ ಹಾಡುಗಳಲ್ಲಿ ಅದ್ವೈತ ತತ್ವಪ್ರತಿಪಾದಕರಾದ ಹರಿದಾಸರ ಹಾಡುಗಳು ಸುಮಾರು ೨೦೦೦ ಸಂಗ್ರಹಗೊಂಡಿದ್ದರೆ ವಿಶಿಷ್ಟಾದ್ವೈತ ತತ್ವದ ಪ್ರತಿಪಾದಕ ಹರಿದಾಸರ ಹಾಡುಗಳು ಸುಮಾರು ೧೫೦೦ರಷ್ಟು ಸಂಗ್ರಹಗೊಂಡಿವೆ. ತತ್ವಪದಗಳು ಮತ್ತು ಸಂಪ್ರದಾಯದ ಹಾಡುಗಳು ಇದರಲ್ಲಿ ಸೇರಿಲ್ಲ. ಇವುಗಳ ಬಿಡಿಬಿಡಿ ಸಂಗ್ರಹ ಗ್ರಂಥಗಳು ಅನೇಕ ಪ್ರಕಟವಾಗಿವೆ. ಇವುಗಳನ್ನೂ ಸಮಗ್ರವಾಗಿ ಸಂಕಲಿಸಿ ಸಂಪುಟಗಳಲ್ಲಿ ಪ್ರಕಟಿಸುವ ಅಗತ್ಯವಿದೆ. ಜೊತೆಗೆ ೧೮ - ೧೯ನೇ ಶತಮಾನದಲ್ಲಿ ಕಂಡು ಬಂದಿರುವ ಅದ್ವೈತ - ವಿಶಿಷ್ಟಾದ್ವೈತ ಹರಿದಾಸರ ಹಾಡುಗಳು ಇನ್ನೂ ಸಾಕಷ್ಟು ಸಂಗ್ರಹವಾಗಬೇಕಾಗಿದೆ. ಈ ಇಡೀ ಸಾಹಿತ್ಯ ಸಂಪೂರ್ಣವಾಗಿ ದಾಖಲೆಯಾಗಿ ಅಭ್ಯಾಸಕ್ಕೆ ಸುಲಭವಾಗಿ ದೊರಕಿದ ಮೇಲಷ್ಟೇ ಈ ಬಗೆಯ 'ಅನುಭಾವ ಸಾಹಿತ್ಯ'ದ ಅಧ್ಯಯನ ರೂಪಗೊಳ್ಳಬೇಕಾಗುತ್ತದೆ. ಅಲ್ಲಿಯವರೆಗೆ ವಿಮರ್ಶಕರು ಆಯಾ ಪ್ರಕಾರಗಳ ಬಿಡಿಬಿಡಿ ಪ್ರಕಟನೆಗಳನ್ನು ಕುತೂಹಲದಿಂದ ನಿರೀಕ್ಷಿಸಬೇಕಾಗಿದೆ ಮತ್ತು ಸಂಶೋಧಕರು ಆಸಕ್ತಿಯಿಂದ ಶೋಧಿಸಿ ಸಂಪಾದಿಸಿ ಪ್ರಕಟಿಸುವುದನ್ನು ಪ್ರೋತ್ಸಾಹಿಸಬೇಕಾಗಿದೆ.

**೩. ಕನ್ನಡ ಕೀರ್ತನ ಸಾಹಿತ್ಯದ ತ್ರಿವೇಣಿ ಸಂಗಮ**

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಪ್ರಮುಖ ಪ್ರಕಾರವಾಗಿರುವ ಹರಿದಾಸ ಅಥವಾದ ಕೀರ್ತನ ಸಾಹಿತ್ಯ ಪರಂಪರೆ ನಾಲ್ಕು ಘಟ್ಟಗಳಲ್ಲಿ ಬೆಳೆದಿದೆ ಯೆಂಬುದು ಸರ್ವವಿದಿತ. ನರಹರಿತೀರ್ಥರು, ಶ್ರೀಪಾದರಾಜರಿಂದ ಇದರ ಆರಂಭಕಾಲವನ್ನೂ ವ್ಯಾಸರಾಯರು, ಪುರಂದರದಾಸರು, ಕನಕದಾಸರು, ವಾದಿರಾಜರು, ವೈಕುಂಠ ದಾಸರ ಕಾಲವನ್ನು ಎರಡನೆಯ ಘಟ್ಟ ಅಥವಾ ಉನ್ನತಿಯ ಕಾಲವೆಂದೂ ವಿಜಯದಾಸರು, ಗೋಪಾಲದಾಸರು, ರಾಘವೇಂದ್ರತೀರ್ಥರು, ಜಗನ್ನಾಥದಾಸರು ಮುಂತಾದವರ ಕಾಲವನ್ನು ಮೂರನೇ ಘಟ್ಟ ಅಥವಾ ವಿಸ್ತಾರ ಕಾಲವೆಂದೂ ವೇಣು ಗೋಪಾಲದಾಸರು, ಪ್ರಾಣೇಶವಿಠಲರು ಮುಂತಾದವರ ಕಾಲವನ್ನು ನಾಲ್ಕನೆಯ ಘಟ್ಟ ಅಥವಾ ಅವನತಿಯ ಕಾಲವೆಂದೂ ಸಾಮಾನ್ಯವಾಗಿ ಗುರುತಿಸಲಾಗುತ್ತಿದೆ.

ವಿಜಯನಗರ ಸಾಮ್ರಾಜ್ಯದ ಸ್ವರ್ಣಯುಗದ ಜೊತೆ ಜೊತೆಗೇ ಹರಿದಾಸ ವಾಙ್ಮಯವೂ ಜನಜನಿತವಾಗಿ, ಸಾಮ್ರಾಜ್ಯದ ಪತನಾನಂತರ ಅದರ ಜನಪ್ರಿಯತೆಯೂ ಕುಗ್ಗಿತು ಎಂಬುದು ಇತಿಹಾಸಕಾರರ ಅಭಿಪ್ರಾಯ. 'ವಿಜಯನಗರ ಸಾಮ್ರಾಜ್ಯದ ಸ್ವರ್ಣಯುಗದಲ್ಲಿ ಪುರಂದರ ಕನಕದಾಸರು ನಾಡಿನಾದ್ಯಂತ.. ವಾದಿರಾಜರು ದಕ್ಷಿಣ ಕನ್ನಡದಾದ್ಯಂತ, ವೈಕುಂಠದಾಸರು ಬೇಲೂರಿನ ಸುತ್ತಮುತ್ತ ಬೆಳೆಸುವುದರ ಮೂಲಕ ೧೬೦೦ರವರೆಗೆ ಹರಿದಾಸ ಸಾಹಿತ್ಯ ಪ್ರಸರಿಸಿತ್ತು... ಅನಂತರ ಕಾರಣಾಂತರದಿಂದ ಹರಿದಾಸ ಪರಂಪರೆ ಅಷ್ಟಾಗಿ ಸ್ಪಷ್ಟವಾಗಿ ಮುಂದುವರಿಯಲಿಲ್ಲ. ಪುರಂದರದಾಸರ ಶಿಷ್ಯರೂ, ವೈಕುಂಠದಾಸರ ಶಿಷ್ಯರೂ ಏನು ಕಾರಣದಿಂದಲೋ ಹೊರಗೆ ಬರಲಿಲ್ಲ. ಹೆಸರು ಪಡೆಯಲಿಲ್ಲ, ಪದಗಳನ್ನು ರಚಿಸಿದಂತೆ ಕಾಣಲಿಲ್ಲ' (ಎಸ್.ಕೆ.ರಾಮಚಂದ್ರರಾವ್, ದಾಸಸಾಹಿತ್ಯ, ಐ.ಬಿ.ಹೆಚ್, ಪು.೮೯) ಸಾಹಿತ್ಯ ಚರಿತ್ರಕಾರರಿಂದ ಹಿಡಿದು ಹೆಚ್ಚುಕಡಿಮೆ ಎಲ್ಲ ವಿದ್ವಾಂಸರೂ ಈ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ಕಾಲದಲ್ಲಿ ನಡೆದ ರಾಜಕೀಯ ಸ್ಥಿತ್ಯಂತರಗಳು, ಆ ಮೂಲಕ ಸಮಾಜಜೀವನ ಮತ್ತು ಧರ್ಮದ ಮೇಲಾದ ಆಘಾತಗಳು ಇದಕ್ಕೆ ಕಾರಣವೆಂದೂ ಊಹಿಸುತ್ತಾರೆ.

ಮಾಧ್ವಮತ ತತ್ವಗಳ ಮುಖ್ಯವಾಹಿನಿಯಾಗಿ ಕೀರ್ತನ ಸಾಹಿತ್ಯವನ್ನು ಗುರುತಿಸಲಾಗುತ್ತದೆ. ಈ ಬಗೆಗಿನ ಈವರೆಗಿನ ಅಧ್ಯಯನವೂ ಇದರ ಹಿನ್ನೆಲೆಯಲ್ಲಿಯೇ ನಡೆದುಬಂದಿದೆ. ೭೦ರ ದಶಕದಲ್ಲಿ ಸ್ಮಾರ್ತಸಂಪ್ರದಾಯದ ಕೀರ್ತನಕಾರರೂ ಇರುವುದನ್ನು ಪ್ರೊ|| ಎಂ.ವಿ. ಸೀತಾರಾಮಯ್ಯ ಮುಂತಾದವರು ಬೆಳಕಿಗೆ ತಂದಿದ್ದಾರೆ. ಚಿದಾನಂದವಧೂತ, ತಿಮ್ಮಪ್ಪದಾಸರು ಮತ್ತು ಅವರ ಶಿಷ್ಯರು, ಪರಮದೇವ, ವೇದಾಂತ ಶಿವರಾಮಶಾಸ್ತ್ರಿಗಳು ಮುಂತಾದವರನ್ನು ಇಲ್ಲಿ ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಕನ್ನಡ ಹರಿದಾಸ ಸಾಹಿತ್ಯದಲ್ಲಿ ದ್ವೈತಕೀರ್ತನ ಪರಂಪರೆಯ ಜೊತೆಗೆ ಅದ್ವೈತಕೀರ್ತನ ಪರಂಪರೆಯನ್ನು ವಿದ್ವಾಂಸರು ಸ್ಪಷ್ಟವಾಗಿ ಗುರುತಿಸುತ್ತಿದ್ದಾರೆ.

ವೈದಿಕಧರ್ಮದ ಇನ್ನೊಂದು ಪ್ರಮುಖ ಶಾಖೆಯಾದ ವಿಶಿಷ್ಟಾದ್ವೈತ ಸಂಪ್ರದಾಯದಲ್ಲಿಯೂ ಇರುವ ಕೀರ್ತನ ಸಾಹಿತ್ಯವನ್ನು ಈಚೆಗೆ ೯೦ರ ದಶಕದಲ್ಲಿ ಪ್ರೊ|| ನಾ. ಗೀತಾಚಾರ್ಯ ಅವರು ಶೋಧಿಸಿ ದಾಖಲಿಸಿದ್ದಾರೆ. ನಾರಾಯಣಶರ್ಮ ಸಂಸ್ಕೃತಿ ಕೇಂದ್ರದ ಮೂಲಕ ಸಂಪಾದಿಸಿ ಪ್ರಕಟಿಸಿರುವ ನಾರಾಯಣಶರ್ಮರ ಕೀರ್ತನೆಗಳು (೧೯೯೩) ರಂಗದಾಸರ ಕೀರ್ತನೆಗಳು (೧೯೯೪) ಮೂವರು ಶ್ರೀವೈಷ್ಣವ ಹರಿದಾಸರ ಕೀರ್ತನೆಗಳು (೧೯೯೯) ಹಾಗೂ ೧೯೯೮ರಲ್ಲಿ ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ದಿಂದ ಪ್ರಕಟವಾದ ತುಮಕೂರು ಜಿಲ್ಲೆಯ ಮೂವರು ಕೀರ್ತನಕಾರರು ಎಂಬ ಪುಸ್ತಕಗಳು ಹಾಗೂ ಶ್ರೀವೈಷ್ಣವ ಹರಿದಾಸಸಾಹಿತ್ಯ - - ಹೊಸ ಶೋಧ (ಇತಿಹಾಸ ದರ್ಶನ, ಸಂ. ೧೪) ಶ್ರೀವೈಷ್ಣೌ ಹರಿದಾಸ ಸಾಹಿತ್ಯ - ಒಂದು ಪರಿಚಯ (ಭೂಷಣ, ಪು. ೬೩೪) ಆದ್ಯ ಶ್ರೀವೈಷ್ಣವ ಕೀರ್ತನಕಾರರಾಗಿ ಬೇಲೂರು ವೈಕುಂಠದಾಸರು (ಇತಿಹಾಸದರ್ಶನ, ಪು. ಸಂಖ್ಯೆ ೧೧೧) ಮುಂತಾದ ಹಲವು ಲೇಖನಗಳು ಈ ಅವಧಿಯಲ್ಲಿ ಪ್ರಕಟವಾಗಿವೆ. 'ಹರಿದಾಸ ಸಾಹಿತ್ಯದ ಮೂರು ದಾರಿಗಳು'(೨೦೦೪) ಎಂಬ ಪುಸ್ತಕದಲ್ಲಿ ಈ ಲೇಖನಕಗಳೆಲ್ಲ ಸಂಕಲನ ಗೊಂಡಿವೆ. ನಾರಾಯಣಶರ್ಮ ಸಂಸ್ಕೃತಿ ಕೇಂದ್ರ 'ಶ್ರೀವೈಷ್ಣವ ಹರಿದಾಸ ಸಾಹಿತ್ಯ ಮಾಲೆ'ಯನ್ನೇ ಆರಂಭಿಸಿ ಈ ಪುಸ್ತಕಗಳನ್ನು ಪ್ರಕಟಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಈ ಮೂಲಕ ಕೀರ್ತನ ಸಾಹಿತ್ಯದ ಅಧ್ಯಯನದ ಇತಿಹಾಸದಲ್ಲಿ ಮಧ್ವ ಸಂಪ್ರದಾಯದ ಮುಖ್ಯವಾಹಿನಿಯಲ್ಲಿ ಅದ್ವೈತ ಸಂಪ್ರದಾಯದ ಕೀರ್ತನಕಾರರ ಜೊತೆಗೆ ವಿಶಿಷ್ಟಾದ್ವೈತ ಸಂಪ್ರದಾಯದ ಕೀರ್ತನಕಾರರೂ ಸೇರ್ಪಡೆಯಾಗಿರುವುದನ್ನು ಕಾಣಬಹುದಾಗಿದೆ. ಇದನ್ನೆಲ್ಲ ಮಾನ್ಯಮಾಡಿರುವ ವಿದ್ವಾಂಸ ವಲಯ ಹರಿದಾಸ ಸಾಹಿತ್ಯವನ್ನು "ತ್ರಿವೇಣಿ ಸಂಗಮ" ಎಂದು ಕರೆಯುತ್ತಿದೆ.

**೪. ಕರ್ನಾಟಕದಲ್ಲಿ ವಿಶಿಷ್ಟಾದ್ವೈತದ ಇತಿಹಾಸ**

ಕರ್ನಾಟಕದಲ್ಲಿ ವಿಶಿಷ್ಟಾದ್ವೈತದ ಇತಿಹಾಸ ದ್ವೈತಕ್ಕಿಂತ ಹಿಂದಿನಿಂದ ಇದ್ದರೂ ೧೨ನೇ ಶತಮಾನದಲ್ಲೇ ಹೊಯ್ಸಳರ ರಾಜಧರ್ಮವಾಗಿ ಬೆಳೆದು ಬಂದಿದ್ದರೂ ಇದು ಜನಸಾಮಾನ್ಯರ ನಡುವೆ ಬೆಳೆದುಬರಲಿಲ್ಲ. ಇದಕ್ಕೆ ಕಾರಣವಾಗಿ ಇದರ ಧಾರ್ಮಿಕ ಆಚರಣೆಗಳು ತಮಿಳು ಭಾಷೆಯಲ್ಲಿದ್ದುದು ಮತ್ತು ಮತೀಯ ಗ್ರಂಥಗಳು ಸಂಸ್ಕೃತ ಹಾಗೂ ದ್ರಾವಿಡ (ತಮಿಳು) ಪ್ರಬಂಧಗಳಾಗಿದ್ದುದು ಎಂಬ ಸಾಮಾನ್ಯ ಅಭಿಪ್ರಾಯವೊಂದಿದೆ. 'ರಾಮಾನುಜಾಚಾರ್ಯರು ಈ ಧರ್ಮದ ತಿರುಳನ್ನು ಎಲ್ಲರಿಗೂ ತಿಳಿಯುವಂತೆ ಸಾರ್ವಜನಿಕವಾಗಿ ಪ್ರಕಟಿಸುವುದರ ಮೂಲಕ ಸಾಮಾನ್ಯ ಜನರನ್ನು ಈ ಧರ್ಮದತ್ತ ಸೆಳೆದು ಭಕ್ತರನ್ನಾಗಿ, ಅನುಯಾಯಿಗಳನ್ನಾಗಿ

ಮಾಡಿದರೇ ವಿನಾ ಮತೀಯ ಆಚರಣೆಯ ವಿಧಿವಿಧಾನಗಳಲ್ಲಿ ನೆಲೆಗೊಳಿಸಲಿಲ್ಲ. ಆದ್ದರಿಂದ ಅನ್ಯಮತೀಯರು ಶ್ರೀವೈಷ್ಣ ಮತಾನುಯಾಯಿಗಳಾದರೇ ವಿನಾ ಶ್ರೀವೈಷ್ಣವ ಬ್ರಾಹ್ಮಣರಾಗಲಿಲ್ಲ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಆದ್ದರಿಂದಲೇ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸುವ ಗ್ರಂಥಗಳು ಕನ್ನಡದಲ್ಲಿ ಪ್ರಸಾರಗೊಳ್ಳಲೂ ಇಲ್ಲ ಮತ್ತು ಸೃಷ್ಟಿಯಾಗಲೂ ಇಲ್ಲ'. (ಮೂವರು ಶ್ರೀವೈಷ್ಣವ ಹರಿದಾಸರು ೧೯೯೯) ಎಂಬ ಮಾತು ಹೆಚ್ಚು ಸಮರ್ಥವಾಗಿರುವಂತೆ ತೋರುತ್ತದೆ. ಆದರೂ ಶ್ರೀವೈಷ್ಣವರೇ ಆದ ಬೇಲೂರು ವೈಕುಂಠದಾಸರ ಮತ್ತು ಪೂರ್ವದಲ್ಲಿ ಶ್ರೀವೈಷ್ಣವ ಅನುಯಾಯಿಗಳಾಗಿದ್ದರೆಂದು ಹೇಳುವ ಕನಕದಾಸರ ಕೀರ್ತನೆಗಳಲ್ಲಿ (ಮತ್ತು ವಿಶೇಷವಾಗಿ ಮೋಹನ ತರಂಗಿಣಿ, ಹರಿಭಕ್ತಿಸಾರ ಕೃತಿಗಳಲ್ಲಿ) ವಿಶಿಷ್ಟಾದ್ವೈತ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದಾದರೂ ಈವರೆಗೆ ಇವು ಮಧ್ವಪರಂಪರೆಯ ಮುಖ್ಯವಾಹಿನಿಯೊಳಗೇ ಸೇರಿಹೋಗಿದ್ದವು. ಹಾಗೆಯೇ ಚರಿತ್ರಕಾರರು ಇದಮಿತ್ಥಂ ಎಂದು ಹೇಳಲಾಗದ, ಕುಮಾರವ್ಯಾಸ, ಲಕ್ಷ್ಮೀಶರ ಕೃತಿಗಳನ್ನು ಶ್ರೀವೈಷ್ಣವತತ್ವದ ಹಿನ್ನೆಲೆಯಲ್ಲಿ ಪುನರಾಲೋಚಿಸಬಹುದಾಗಿದೆ. ಲಕ್ಷ್ಮೀಶನಂತು ಸ್ಪಷ್ಟವಾಗಿ ಶ್ರೀವೈಷ್ಣವ ಮತೀಯನೇ ಆಗಿದ್ದು ವಿದ್ವಾಂಸರು ಅವನನ್ನು ಲಕ್ಷ್ಮೀಕಾಂತ ಹೆಬ್ಬಾರ ಎಂದು ಹೆಸರಿಸಿದ್ದಾರೆ. ಅವನ ಹೆಸರಿನಲ್ಲಿ ಹತ್ತಾರು ಕೀರ್ತನೆಗಳೂ ಇವೆ. ಈ ಹಿನ್ನೆಯಲ್ಲಿ ವೈಕುಂಠದಾಸರು, ಕನಕದಾಸರು ಮತ್ತು ಲಕ್ಷ್ಮೀಶರನ್ನು ಶ್ರೀವೈಷ್ಣವ ಕೀರ್ತನಕಾರರನ್ನಾಗಿ ಪರಿಗಣಿಸಲಾಗಿದೆ. ಹೀಗೆ ಹರಿದಾಸ ಸಾಹಿತ್ಯದ ಉನ್ನತಿಯ ಕಾಲದಲ್ಲೆ ಶ್ರೀವೈಷ್ಣವ ಕೀರ್ತನ ಸಾಹಿತ್ಯ ಕಾಣಿಸಿಕೊಂಡಿರುವುದನ್ನು ಕಾಣಬಹುದು.

ಚಿಕ್ಕದೇವರಾಯ ಒಡೆಯರ ಕಾಲದಲ್ಲಿ ಇದು ರಾಜಧರ್ಮವಾಗಿ ಪ್ರವರ್ಧಮಾನಕ್ಕೆ ಬಂದ ನಂತರವೇ ಮತ್ತೆ ನೇರವಾಗಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ಕಾಣಿಸಿಕೊಂಡಿದ್ದು, ಈ ಕಾಲದ ಚಿಕ್ಕದೇವರಾಜನ 'ಚಿಕ್ಕದೇವರಾಜ ಬಿನ್ನಪ', ತಿರುಮಲಾರ್ಯನ 'ಗೀತಗೋಪಾಲ', ಚಿಕ್ಕುಪಾಧ್ಯಾಯನ 'ದಿವ್ಯಸೂರಿಚರಿತ', ಸಂಚಿಹೊನ್ನಾಮ್ಮನ 'ಹದಿಬದೆಯ ಧರ್ಮ' ಮುಂತಾದವು ವಿಶಿಷ್ಟಾದ್ವೈತ ತತ್ವವನ್ನು ಪ್ರತಿಪಾದಿಸುವ ಕನ್ನಡ ಕೃತಿಗಳಾಗಿವೆ. ಆನೇ ಘಟ್ಟದ ಕೀರ್ತನ ಸಾಹಿತ್ಯ ಪರಂಪರ;ಎಯ ಸ್ಯಷ್ಟಿಗೆ ಗೀತಗೋಪಾಲವೇ (ಸು.೧೭೦೦) ಮೂಲವಾಗಿದೆ ಎಂಬುದು ಎಲ್ಲ ವಿದ್ವಾಂಸರ ಮತ. 'ಹರಿದಾಸ ಸಾಹಿತ್ಯದ ಕೀರ್ತನ ಪ್ರಕಾರವನ್ನು ಶ್ರೀವೈಷ್ಣವ ಕವಿಗಳು ಬಳಸಿಕೊಂಡರು'. (ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೩೦) 'ಹರಿ ಸಂಕೀರ್ತನೆಗಳ ಭಂಡಾರಕ್ಕೆ ಗೀತಗೋಪಾಲವು ಉನ್ನತವಾದ ಅಲ್ಲದಿದ್ದರೂ ತುಂಬ ಮೆಚ್ಚುವಂಥ ಗೀತನಿಧಿಯನ್ನು ನೀಡಿರುತ್ತದೆ.' (ಅದೇ ಪು. ೩೦, ೩೧) 'ಶ್ರೀವೈಷ್ಣವ ಸಂಪ್ರದಾಯದ ಗೀತೆಗಳಲ್ಲಿಯಂತು ಕನ್ನಡದಲ್ಲಿ ಇದೇ ಮೊದಲನೆಯದು' (ಎಂ.ವಿ.ಸೀ., ಹರಿದಾಸರು ಮತ್ತು ಅನುಭಾವ ಕವಿಗಳು. ಪು.೫) ಎಂಬ ಹೆಗ್ಗಳಿಕೆಗೆ ಈ ಕೃತಿ ಪಾತ್ರವಾಗಿದೆ. ಆದರೆ ಇದು ಶುದ್ಧ ಕೀರ್ತನಸಾಹಿತ್ಯವಲ್ಲ, ಅಂದರೆ ಪುರಂದರ - ಕನಕದಾಸರುಗಳಂತಹ ಭಿನ್ನವಸ್ತು - ವಿಷಯವಿರುವ ಬಿಡಿಬಿಡಿ ಕೀರ್ತನೆಗಳಲ್ಲ. ಒಂದು ನಿರ್ಧಿಷ್ಟ ಕಾವ್ಯದ ಸ್ವರೂಪದ್ದಾಗಿದ್ದು ಜಯದೇವನ ಗೀತಗೋವಿಂದದ ಅನುವಾದವಾಗಿದೆ ಎಂಬ ಅಭಿಪ್ರಾಯವಿದೆ. ಇದರೊಂದಿಗೆ ಸಿಂಗಿರಾರ್ರ‍ಯನ 'ಗೀತರಂಗೇಶ್ವರ', ಚಿಕ್ಕುಪಾಧ್ಯಾಯನ 'ಚಿಕ್ಕದೇವರಾಯ ಶೃಂಗಾರ ಪದಗಳು', 'ರಂಗನಾಥನ ಲಾಲೀ ಪದಗಳು' ಅನಂತರದ ಕಳಲೆ ಕಾಂತರಾಜನ ಮಗಳಾದ ದೊಡ್ಡಒಡೆಯರ ಪಟ್ಟಮಹಿಷಿ (೧೭೯೫) ಚೆಲುವಾಂಬೆಯ 'ವೆಂಕಟಾಚಲ ಮತ್ತು ಅಲಮೇಲುಮಂಗಮ್ಮ ಲಾಲೀಪದಗಳು', 'ವರನಂದಿ ಕಲ್ಯಾಣ' ಮುಂತಾದವು ಶ್ರೀವೈಷ್ಣವ ಕೀರ್ತನಸಾಹಿತ್ಯದಲ್ಲಿ ಬರಬಲ್ಲವೆನಿಸಿದರೂ ಇವೂ ಸಹ ನಿರ್ದಿಷ್ಟ ವಸ್ತು - ವಿಷಯಕ್ಕೆ ಸಂಬಂಧಿಸಿದ ಕೀರ್ತನಪ್ರಕಾರದ ಕಾವ್ಯಕೃತಿಗಳಾಗಿ ನಿಲ್ಲುತ್ತವೆಂಬ ಕಾರಣದಿಂಧ ಈವರೆಗಿನ ಹರಿದಾಸ ಚರ್ಚೆಯಲ್ಲಿ ಯಾರೂ ಅಳವಡಿಸಿಕೊಂಡಿಲ್ಲ. ಆದರೆ ಗೀತಗೋಪಾಲ ಶ್ರೀವೈಷ್ಣವ ತತ್ವಪ್ರತಿಪಾದನೆಯನ್ನು ಒಳಗೊಂಡಿರುವ ಶುದ್ಧ ಹರಿದಾಸ ಸಾಹಿತ್ಯಕೃತಿಯಾಗಿದ್ದು ಇದರ ಪ್ರಭಾವದಿಂದಲೇ ಕನ್ನಡ ಕೀರ್ತನ ಸಾಹಿತ್ಯ ಹತ್ತೊಂಬತ್ತನೆಯ ಶತಮಾನದವರೆಗೆ ವ್ಯಾಪಕವಾಗಿ ಕಾಣಿಸಿಕೊಂಡಿತು ಎಂದೇ ಹೇಳಬೇಕಾಗುತ್ತದೆ. ಈಚೆಗೆ ನಿಧನರಾದ ಶ್ರೀ ಎಂ.ಆರ್. ನರಸಿಂಹನ್ ಅವರೂ ಗೀತಗೋಪಾಲದ ಕೀರ್ತನೆಗಳ ಸ್ವಾರಸ್ಯವನ್ನು ದಾಖಲಿಸುತ್ತ 'ಇವು ಕನ್ನಡ ಕೀರ್ತನ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ' ಎಂದಿದ್ದಾರೆ (ಕರ್ನಾಟಕ ಲೋಚನ - ಡಿಸೆಂಬರ್ ೨೦೦೬) ಈ ದೃಷ್ಟಿಯಲ್ಲಿ ಗೀತಗೋಪಾಲ ಮತ್ತು ಸಮಕಾಲೀನರಾದ ಇತರರ ಎಲ್ಲ ಹಾಡುಗಳ ಕೃತಿಗಳನ್ನೂ, ಕೀರ್ತನೆಗಳ ದೃಷ್ಟಿಯಿಂದ ಪುನಃ ಪರಿ ಶೀಲಿಸುವ ಅಗತ್ಯವಿದೆ. ಇವನ್ನು ಸಮಗ್ರವಾಗಿ ಸಂಕಲಿಸುವ ಪ್ರಯತ್ನ ನಡೆಯುತ್ತಿದೆ.

೧೯ - ೨೦ನೇ ಶತಮಾನವು ಶ್ರೀವೈಷ್ಣವ ಹರಿದಾಸಸಾಹಿತ್ಯದ ಸಮೃದ್ಧಿಯ ಕಾಲವಾಗಿದೆ. ಕ್ರಿ.ಶ. ೧೮೪೭ರ ಸುಮಾರಿನಲ್ಲಿದ್ದ ತುಳಸೀರಾಮದಾಸರು ಹಾಗೂ ೧೮೩೦ರ ಅವಧಿಯಲ್ಲಿ ಕಾಣಿಸಿಕೊಂಡ ರಂಗದಾಸರು, ವೆಂಕಟವರದಾರ್ಯರು ಮತ್ತು ಯದುಗಿರಿಯಮ್ಮ ಅವರುಗಳು ೧೯ನೇ ಶತಮಾನದ ವಿಶಿಷ್ಟಾದ್ವೈತ ಹರಿದಾಸ ಪರಂಪರೆಯ ಆರಂಭದ ಕೀರ್ತನಕಾರರಾಗಿ ಕಂಡುಬರುತ್ತಾರೆ. ಯದುಗಿರಿಯಮ್ಮ ಶ್ರೀವೈಷ್ಣವ ಮಹಿಳಾ ಕೀರ್ತನಕಾರರಲ್ಲಿ ಪ್ರಥಮರೆನಿಸಿದ್ದಾರೆ. ಈವರೆಗಿನ ಪರಿ ವೀಕ್ಷಣೆಯ ಹಿನ್ನೆಲೆಯಲ್ಲಿ ಶ್ರೀವೈಷ್ಣವ ಹರಿದಾಸರನ್ನು ಈ ರೀತಿ ಪಟ್ಟಿ ಮಾಡಬಹುದು.

೧. ಬೇಲೂರು ವೈಕುಂಠದಾಸರು, ಬೇಲೂರು (ಕ್ರಿ.ಶ. ಸು. ೧೪೫೦)
೨. ಕನಕದಾಸರು, ಕಾಗಿನೆಲೆ (ಕ್ರಿ.ಶ.ಸು. ೧೫೦೮)
೩. ಕವಿ ಲಕ್ಷ್ಮೀಶ (ಲಕ್ಷ್ಮಿಕಾಂತ ಹೆಬ್ಬಾರಂ) ದೇವನೂರು (ಸು.೧೫೫೦)
೪. ತಿರುಮಲಾರ್ಯ, ಶ್ರೀರಂಗಪಟ್ಟಣ (ಕ್ರಿ.ಶ.ಸು. ೧೭೦೦)
೫. ಯದುಗಿರಿಯಮ್ಮ, ಬೆಂಗಳೂರು (ಕ್ರಿ.ಶ.ಸು. ೧೮೨೮)
೬. ರಂಗದಾಸರು (ತುಮಕೂರು ಜಿಲ್ಲೆ) ಕ್ರಿ.ಶ. ೧೮೩೦)
೭. ರಂಗದಾಸರು (ತುಮಕೂರು ಜಿಲ್ಲೆ) ಕ್ರಿ.ಶ. ೧೮೩೦
೭. ವೆಂಕಟವರದಾರ್ಯರು (ಸರಗೂರು, ಚಾಮರಾಜನಗರ) ಕ್ರಿ.ಶ. ಸು. ೧೮೩೦
೮. ತುಳಸೀರಾಮದಾಸರು (ಬೆಂಗಳೂರು) ಕ್ರಿ.ಶ. ೧೮೪೭
೯. ಮಳಿಗೆ ರಂಗಸ್ವಾಮಿದಾಸರು (ಮುಳಬಾಗಿಲು) ಕ್ರಿ.ಶ. ೧೮೬೮
೧೦. ಚನ್ನಪಟ್ಟಣದ ಅಹೋಬಲದಾಸರು (ಚನ್ನಪಟ್ಟಣ) ಕ್ರಿ.ಶ. ೧೮೬೦
೧೧. ಆಸೂರಿ ರಾಮಸ್ವಾಮಿ ಅಯ್ಯಂಗಾರ್ (ಬೆಂಗಳೂರು) ಕ್ರಿ.ಶ. ೧೮೮೬
೧೨. ನಂಜನಗೂಡು ತಿರುಮಲಾಂಬ (ನಂಜನಗೂಡು) ಕ್ರಿ.ಶ. ಸು ೧೮೮೭
೧೩. ಶಾಮಶರ್ಮದಾಸರು (ಬೆಂಗಳೂರು ಜಿಲ್ಲೆ) ಕ್ರಿ.ಶ. ೧೮೯೧
೧೪. ಎಸ್. ಸಂಪತ್ತೈಯಂಗಾರ್. (ಬೆಂಗಳೂರು) ಕ್ರಿ.ಶ. ೧೯೦೦
೧೫. ನಾರಾಯಣಶರ್ಮರು (ಬೆಂಗಳೂರು ಜಿಲ್ಲೆ) ಕ್ರಿ.ಶ. ಸು. ೧೯೧೨
೧೬. ಕೋಸಲಪುರೀಶ ಅಂಕಿತದ ಕೀರ್ತನಕಾರರು ಸು. ೧೮ನೇ ಶ.
೧೭. ಬಡ್ಡಣ್ಣಯ್ಯಾಚಾರ್ (ಅಣ್ಣಾವಧೂತರು) ಸು. ೧೯ನೇ ಶ.

ತುಳಸಿರಾಮದಾಸರ ಶಿಷ್ಯಪರಂಪರೆಯ ಸು. ೨೫ ಜನ ಹರಿದಾಸರು (೧೮೫೦ ರಿಂದ ೧೯೫೦) ಕಂಡುಬಂದಿದ್ದರೂ ಇವರ ಇತಿವೃತ್ತ ಮತ್ತು ಕೀರ್ತನೆಗಳು ಅಲಭ್ಯ. ಆದರೆ ಇವರುಗಳು ತುಳಸಿರಾಮದಾಸರನ್ನು ಸ್ತುತಿಸಿರುವ ಕೀರ್ತನೆಗಳು ಲಭ್ಯವಿದೆ.

ಸರಿಯಾಗಿ ಸರ್ವೇಕ್ಷಣೇ ಮಾಡಿದಲ್ಲಿ ಈ ಸಂಪ್ರದಾಯದಲ್ಲಿ ಇನ್ನೂ ಹೆಚ್ಚಿನ ಕೀರ್ತನಕಾರರು ಲಭ್ಯವಾಗುವ ಸಾಧ್ಯತೆಯಿದೆ. ಈವರೆಗೆ ಕೀರ್ತನೆಗಳು ಲಭ್ಯವಾಗಿರುವುದನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ. ಲಭ್ಯವಾಗಬೇಕಾದ ಕೀರ್ತನಕಾರರ ಮತ್ತು ಕೀರ್ತನೆಗಳ ಸಂಖ್ಯೆ ಅಪಾರವಾಗಿಯೇ ಇದೆ. ಈವರೆಗಿನ ದಾಖಲೆಯಲ್ಲೇ ಸಾವಿರವನ್ನು ದಾಟುವ ಇವರ ಕೀರ್ತನೆಗಳ ಸಂಖ್ಯೆ ಸಮಗ್ರ ಸರ್ವೇಕ್ಷಣೆಯ ನಂತರ ಎರಡು ಸಾವಿರಕ್ಕೂ ಮಿಗಿಲಾಗುತ್ತದೆ.

ಶ್ರೀವೈಷ್ಣವ ಕೀರ್ತನಕಾರರು ಎಂದರೆ ಶ್ರೀವೈಷ್ಣವ ಸಂಪ್ರದಾಯದಲ್ಲಿ ಅಂದರೆ ವಿಶಿಷ್ಟಾದ್ವೈತ ತತ್ವದ ತಳಹದಿಯ ಮೇಲೆ ಕೃತಿಗಳನ್ನು ರಚಿಸಿರುವವರು ಎಂದು ಗ್ರಹಿಸಲಾಗಿದೆ. ಇಲ್ಲಿ ಶ್ರೀವೈಷ್ಣವ ಮತೀಯರಷ್ಟೇ ಅಲ್ಲದೆ ಪ್ರಮುಖವಾಗಿ ಅನ್ಯಮತೀಯರೂ ಈ ತತ್ವಪ್ರತಿಪಾದನೆಯಲ್ಲಿ ಕಾಣಸಿಗುತ್ತಾರೆ. (ಕನಕದಾಸರು, ಮಳಿಗೆ ರಂಗಸ್ವಾಮಿದಾಸರು, ಚನ್ನಪಟ್ಟಣದ ಅಹೋಬಲದಾಸರು ಇತ್ಯಾದಿ) ಆದ್ದರಿಂದ ಕೀರ್ತನೆಗಳಲ್ಲಿ ಕಂಡುಬರುವ ಶ್ರೀವೈಷ್ಣವ ತತ್ವದ ಲಕ್ಷಣಗಳ ದೃಷ್ಟಿಯಿಂದ ಇಲ್ಲಿನ ಕೀರ್ತನಕಾರರನ್ನು

ಶ್ರೀವೈಷ್ಣವ ತತ್ವದ ಲಕ್ಷಣಗಳ ದೃಷ್ಟಿಯಿಂದ ಇಲ್ಲಿನ ಕೀರ್ತನಕಾರರನ್ನು ಶ್ರೀವೈಷ್ಣವ ಕೀರ್ತನಕಾರರು ಎಂದು ಪರಿಗಣಿಸಲಾಗಿದೆ. ಈ ಕಾರಣದಿಂದಲೇ ಶ್ರೀವೈಷ್ಣವ ಕೀರ್ತನ ಸಾಹಿತ್ಯವು, ಕೇವಲ ವೈದಿಕ ಸಾಹಿತ್ಯದ ಮಿತಿಯಲ್ಲಿ ನಿಲ್ಲದೆ ಜನಪರವಾದ ಸಾಹಿತ್ಯವಾಗಿದ್ದು ಹರಿದಾಸಸಾಹಿತ್ಯಕ್ಕಿದ್ದ ವೈದಿಕದ ಮಿತಿಯನ್ನು ಮೀರಿ ನಿಲ್ಲುತ್ತದೆ.

(೨)

**೫. ಸಂಕ್ಷಿಪ್ತದಲ್ಲಿ ಶ್ರೀವೈಷ್ಣವ ತತ್ವದರ್ಶನ**

ಕೀರ್ತನೆಗಳಲ್ಲಿ ಕಂಡುಬರುವ ಈ ಧರ್ಮ - ತತ್ವದ ಪ್ರತಿಪಾದನೆಯನ್ನು ಅರ್ಥಮಾಡಿಕೊಳ್ಳುವ ಉದ್ದೇಶಕ್ಕಾಗಿ ಇಲ್ಲಿ ಶ್ರೀವೈಷ್ಣವ ಧರ್ಮದ ಮುಖ್ಯ ತತ್ವಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ.

**ಅ. ಶ್ರೀವೈಷ್ಣವ ಧರ್ಮ:** ಶ್ರೀವೈಷ್ಣವ ಧರ್ಮವು 'ಶ್ರೀವೈಷ್ಣವ ಮತ' 'ಪ್ರಪತ್ತಿ ಧರ್ಮ' 'ಶ್ರೀವೈಷ್ಣವ ಸಿದ್ಧಾಂತ' 'ರಾಮಾನುಜ ದರ್ಶನ' 'ಭಗವದ್ರಾಮಾನುಜೀಯ' 'ಉಭಯವೇದಾಂತ' 'ಸವಿಶೇಷಾದ್ವೈತ' 'ವಿಶಿಷ್ಟಾದ್ವೈತ' 'ವೀರವೈಷ್ಣವ' ಮುಂತಾದ ಹೆಸರುಗಳಿಂದ ಪ್ರಚಲಿತವಾಗಿರುವ ವಿಷ್ಣುಪಾರಮ್ಯದಿಂದ ಕೂಡಿದ ಧರ್ಮ. ದಕ್ಷಿಣ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಬಹುಸಂಖ್ಯಾತರ ಧರ್ಮ. ವೈದಿಕ ಜನಾಂಗದಲ್ಲಿರುವ ಒಂದು ಮುಖ್ಯ ಪಂಗಡ. ತ್ರಿಮತಸ್ಥ ಬ್ರಾಹಣರಲ್ಲಿ ಒಂದು ಗುಂಪು.

ವೇದಕಾಲದಿಂದಲೂ ರೂಢಿಯಲ್ಲಿದ್ದ ವಾಸುದೇವ ಅಥವ ಕೃಷ್ಣಪೂಜೆಯ ಭಕ್ತಿಪಂಥ ಅಥವ ಭಾಗವತ ಸಂಪ್ರದಾಯವು ಹಲವು ಮಾರ್ಪಾಟುಗಳನ್ನು ಹೊಂದುತ್ತ ಮಹಾಭಾರತದಲ್ಲಿ ಒಂದು ಖಚಿತವಾದ ರೂಪವನ್ನು ಪಡೆಯಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾಋಎ. ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಮೂಲಕ ವಿಷ್ಣುವಿನ ರಾಮ - ಕೃಷ್ಣ - ಅವತಾರದ ಕಥೆಗಳು ಜನಪ್ರಿಯವಾಗಿ ವೇದ - ಆಗಮ - ಉಪನಿಷತ್ತುಗಳ ಸಾರವೆಲ್ಲ ಇವುಗಳಲ್ಲಿ ಮೈಗೂಡಿಕೊಂಡು, ಹಲವು ರೂಪಗಳಲ್ಲಿ ಆಚರಣೆಯಲ್ಲಿದ್ದ ವೈದಿಕ ಸಂಸ್ಕೃತಿಯೊಂದು ಪ್ರಬಲವಾಗಿ ಈ ನೆಲದಲ್ಲಿ ಬೇರೂರಿತು. ಪದೇ ಪದೇ ಅನ್ಯಸಂಸ್ಕೃತಿಗಳು ಇದರ ಮೇಲೆ ದಾಳು ಮಾಡಿ - ಪ್ರಭಾವಬೀರಿ ಭಿನ್ನಾಭಿಪ್ರಾಯಗಳಿಗೆ ಭಿನ್ನಪಂಥಗಳಿಗೆ ಕಾರಣವಾಗಿರುವುದನ್ನು ಇತಿಹಾಸ ಹೇಳುತ್ತದೆ. ಅಂತಹ ಸಂದರ್ಭದಲ್ಲೆಲ್ಲ ಒಬ್ಬೊಬ್ಬ ಸಮಾಜಸುಧಾರಕರು, ಧರ್ಮಗುರುಗಳು, ಆಚಾರ್ಯಪುರುಷರು ಹುಟ್ಟಿಕೊಂಡು ವೈದಿಕ ಧರ್ಮ - ಸಂಸ್ಕೃತಿಯನ್ನು ಇನ್ನಷ್ಟು ಭದ್ರಪಡಿಸಿರುವುದನ್ನು ಕಾಣುತ್ತೇವೆ. ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಬಸವಣ್ಣ, ವಿವೇಕಾನಂದ, ಗಾಂಧೀಜಿ ಇವರೆಲ್ಲ ಆ ಸಾಲಿನಲ್ಲಿ ನಿಲ್ಲುವವರೇ. ಇವರುಗಳ ತತ್ವ ಚಿಂತನೆಗಳು ತತ್ವತ್ರಯವನ್ನಾಧರಿಸಿವೆ.

**ಆ. ತತ್ವತ್ರಯ:** ಪ್ರಪಂಚದ ಮೂರು ತತ್ವಗಳಾದ ಪುರುಷ - ಪ್ರಕೃತಿ - ಪರಮಾತ್ಮ ಅಥವಾ ಜೀವ - ಜಗತ್ತು - ಜಗನ್ನಿಯಾಮಕ ಅಥವ ಚೇತನ - ಅಚೇತನ ಬ್ರಹ್ಮ ಅಥವಾ ಚಿತ್ - - ಅಚಿತ್ - ಈಶ್ವರ ಈ ಮೂರನ್ನು ವಿವರಿಸಿ ಪರಸ್ಪರ ಸಂಬಂಧ - ಅರ್ಥಗಳನ್ನು ತಿಳಿಸುವುದೇ ಎಲ್ಲ ಧರ್ಮಗಳ ಗುರಿ, ಇದರ ಜಿಜ್ಞಾಸೆಯೇ ಅನೇಕ ಪಂಥಗಳಿಗೆ, ಸಿದ್ಧಾಂತಗಳಿಗೆ, ಮತಗಳ ಹುಟ್ಟಿಗೆ ಕಾರಣವಾಗಿದೆ. ಅದ್ವೈತವಿಶಿಷ್ಟಾದ್ವೈತ - ದ್ವೈತಗಳೂ ಇದರ ಫಲವೇ ಆಗಿದೆ. ಜಗತ್ ಸ್ವರೂಪಿಯಾದ ದೇವರನ್ನು ಪುರುಷ ಬ್ರಹ್ಮ ಈಶ್ವರ ಎಂದೆಲ್ಲ ಕರೆದು ಅವನಿಗೂ ಈ ಜಗತ್ತಿನಲ್ಲಿ ಕಾಣುವ ಜಡ - ಚೇತನಗಳು ಅಥವ ಚಿತ್ - ಅಚಿತ್‌ಗಳಿಗೂ ಇರುವ ಪರಸ್ಪರ ಸಂಬಂಧದ ಸ್ವರೂಪವನ್ನು ಈ ಮೂರು ಮತಗಳು ಮೂರು ಬೇರೆ ಬೇರೆ ರೀತಿಯಲ್ಲಿ ಚರ್ಚಿಸುವುದರ ಮೂಲಕ ಭಿನ್ನಮತಗಳಾಗಿ ಬೇರ್ಪಟ್ಟಿವೆ.

ಜೀವ ಮತ್ತು ಜಗತ್ತುಗಳು ಜಗದೀಶ್ವರನಿಂದಲೇ ಪ್ರೇರತಿವಾದವುಗಳು, ಇವೆರಡೂ ಒಂದೇ, ಇವುಗಳಲ್ಲಿ ಭೇದವಿಲ್ಲ, ಪರಮಾತ್ಮನಿಂದಲೇ ನಡೆಯತಕ್ಕವುಗಳು, ಪರಮಾತ್ಮನ ವಿನಾ ಬೇರೆ ವಸ್ತುವಿಲ್ಲ, ಪರಮಾತ್ಮ ಒಬ್ಬನೇ ಎಂದು ಅಭೇದವನ್ನು ಹೇಳುವ ತತ್ವವೇ ಅದ್ವೈತ. ಇವೆರಡೂ ಬೇರೆ ಬೇರೆ ಎಂದು ಭೇದವನ್ನು ಕಲ್ಪಿಸುವ ತತ್ವದ್ವೈತ. ವಿಶಿಷ್ಟಾದ್ವೈತದಲ್ಲಿ ಈ ಎರಡು ತತ್ವಗಳನ್ನೂ ಬೆಸೆಯುವ ಕೆಲಸಮಾಡಿರುವಂತಿದೆ. ಚಿತ್ - ಅಚಿತ್‌ಗಳು ಈಶ್ವರನಿಂದ ಬೇರೆಯಾದರೂ ಅವನಿಗೆ

ಶರೀರವಾಗಿರತಕ್ಕವು, ಅವನ ವಿಶೇಷಣಗಳು, ಆದ್ದರಿಂದ ಅವನಿಲ್ಲದೆ ಇವಕ್ಕೆ ಅಸ್ತಿತ್ವವಿಲ್ಲ. ಹಾಗಾಗಿ ಈ ವಿಶೇಷಣಗಳಿಂದ ಕೂಡಿದ ಪರಮಾತ್ಮನೊಬ್ಬನೇ ದೈವ. ಜೀವ, ಜಗತ್ತುಗಳು ಜಗದೀಶ್ವರನ ಶರೀರ, ವಿಶೇಷಣ ಎಂಬ ವೈಶಿಷ್ಟ್ಯವನ್ನು ಹೇಳುವ ಮೂಲಕ ವಿಶಿಷ್ಟಾದ್ವೈತವೆನಿಸಿದೆ.

ಈ ತತ್ವಗಳು ಮತ - ಪಂಥಗಳಾಗಿ ಬಳಕೆಗೆ ಬರುವ ಕಾಲದಲ್ಲಿ ವೈದಿಕ ಸಂಸ್ಕೃತಿಯಲ್ಲಿ ಪೂಜೆಗೊಳ್ಳುತ್ತಿದ್ದ ಈಶ್ವರ ಸ್ವರೂಪಕ್ಕೆ ಎರಡು ರೂಪಗಳಿದ್ದವು. ಶಿವ - ಕೇಶವ ಅಥವಾ ಹರಿ - ಹರ. ವೇದಗಳ ಕಾಲದಲ್ಲಿ ಇವುಗಳ ಜೊತೆಗೆ ಇಂದ್ರ, ವರುಣ, ಅಗ್ನಿ, ಸೂರ್ಯ, ಬ್ರಹ್ಮ ಇನ್ನೂ ಮುಂತಾದ ಅನೇಕ ದೇವತೆಗಳೂ ಪೂಜಾರ್ಹವಾಗಿದ್ದವು. ಕಾಲಕ್ರಮೇಣ ಅವುಗಳೆಲ್ಲ ಹಿಂದೆ ಸರಿದು ಈ ಎರಡು ದೈವಗಳೇ ಪ್ರಾಬಲ್ಯ ಸಾಧಿಸಿದ್ದವು. ಅದ್ವೈತತತ್ವವು ಹರಿ - ಹರ ಇಬ್ಬರನ್ನೂ ಸಮಾನ ವಾಗಿ ಕಂಡು ಈಶ್ವರರೂಪವನ್ನು ಬ್ರಹ್ಮ ಎಂದು ಕರೆದು ಅಬೇಧ ಕಲ್ಪಿಸಿದರೆ ದ್ವೈತ ದಲ್ಲಿ ಹರನನ್ನು ಒಪ್ಪಿಕೊಂಡರೂ ಈಶ್ವರಸ್ವರೂಪವನ್ನು ಹರಿ ಎಂದು ಕರೆದು ಹರಿ ಪಾರಮ್ಯವನ್ನು ಸಾಧಿಸಿರುವುದನ್ನು ಕಾಣುತ್ತೇವೆ. ವಿಶಿಷ್ಟಾದ್ವೈತ ಹರನನ್ನು ನಿರಾಕರಿಸಿ ಹರಿಸರ್ವೋತ್ತಮತ್ವವನ್ನು ಮಾತ್ರ ಸ್ವೀಕರಿಸಿ ಹರಿಏಕನಿಷ್ಠೆಯನ್ನು ಸಾಧಿಸಿದೆ. ಇದನ್ನು ಈ ಕೆಳಕಂಡ ವಿಶೇಷ ಲಕ್ಷಣಗಳಿಂದ ಗುರುತಿಸಬಹುದಾಗಿದೆ.

**೧. ಶ್ರೀಹರಿ ಏಕನಿಷ್ಠೆ:** ಈ ಭೂಲೋಕ, ಇದರೊಂದಿಗಿರುವ ಇನ್ನೂ ಹಲವು ಲೋಕಗಳನ್ನು ಹೊಂದಿರುವ, ಬ್ರಹ್ಮಾಂಡವನ್ನೇ ವ್ಯಾಪಿಸಿರುವ, ಈ ಜಗತ್ತನ್ನೇ ದೇಹವನ್ನಾಗಿಸಿಕೊಂಡಿರುವ, ಸರ್ವಶಕ್ತಿ ಸ್ವಾತಂತ್ರ್ಯಗಳಿಂದ ಕೂಡಿರುವ ಪುರುಷನೊಬ್ಬನಿರುವನು. ಅವನು ಊಹಿಸಲಸಾಧ್ಯವಾದ ವಿಶ್ವರೂಪಿಯಾಗಿರುವನಾದರೂ ಬೇರೆ ಬೇರೆ ರೂಪಗಳನ್ನೂ ಧರಿಸುವ ಶಕ್ತಿಯುಳ್ಳವನು. ಸರ್ವೇಶ್ವರನೂ ಪರಮ ಪುರುಷನೂ ಸರ್ವಶಕ್ತನೂ ಪರಮಾತ್ಮನೂ ಆದ ಈತನು 'ನಾರಾಯಣ' ರೂಪದಿಂಧ ವೈಕುಂಠದಲ್ಲಿರುವನು. ಈ ವೈಕುಂಠ ಲೋಕವನ್ನು ' ಪರಮಪದ' ಎಂದು ಕರೆದಿದ್ದು ನಾರಾಯಣನನ್ನು 'ಪರವಾಸುದೇವ' ರೂಪದಲ್ಲೂ ಗುರುತಿಸಲಾಗಿದೆ. ಇವನು ಸಮಸ್ತ ಕಲ್ಯಾಣಗುಣಾನ್ವಿತ, ದಿವ್ಯಮಂಗಳಕರ ವಿಗ್ರಹ, ಸಮಸ್ತ ಸಂಪತ್ತುಳ್ಳವನು, ಪರಮಕಾರುಣ್ಯಮೂರ್ತಿ. ಇವನಿಗೆ ಸಮಾನರೂ ಅಧಿಕರೂ ಈ ಬ್ರಹ್ಮಾಂಡದಲ್ಲಿ ಮತ್ತೊಬ್ಬರಿಲ್ಲ. ಇವನು 'ಶ್ರೀ' ಅಥವ 'ಲಕ್ಷ್ಮೀ' ಹೆಸರಿನ ಪತ್ನೀ ಸಮೇತನಾಗಿರುತ್ತಾನೆ. ಶ್ರೀಮನ್ನಾರಾಯಣನಂತೆ ಶ್ರೀದೇವಿಯೂ ಈಶ್ವರ ಸ್ವರೂಪ ಳಾದರೂ ನಾರಾಯಣನಿಗೆ ಅಧೀನ ಸ್ವಾತಂತ್ರ್ಯವುಳ್ಳವನು. ವೈಕುಂಠದಲ್ಲಿ ಲಕ್ಷ್ಮೀ ನಾರಾಯಣನೊಂದಿಗೆ ಅನಂತ (ಆದಿಶೇಷ) ಗರುಡ, ವಿಶ್ವಕ್ಸೇನರೂ ಇದ್ದು ಇವರೆಲ್ಲ ನಿತ್ಯರು ಮತ್ತು ನಾರಾಯಣನ ಸೇವಕರು.

ಹೀಗೆ ಸರ್ವೋತ್ತಮನಾಗಿರುವ ಶ್ರೀಮನ್ನಾರಾಯಣನೇ 'ಪರತತ್ವ' ಎಂದು ನಂಬುವುದೇ ಶ್ರೀವೈಷ್ಣವ ಧರ್ಮದ ಸಿದ್ಧಾಂತ. ಈ ಸಿದ್ಧಾಂತಜ್ಞಾನವು ಜೀವನ ಆತ್ಮ ಶ್ರೇಯಸ್ಸಿಗೆ ಕಾರಣವಾಗಿ ಆ ಶ್ರೇಯಸ್ಸೇ ಮುಕ್ತಿ ಎನಿಸಿಕೊಳ್ಳುತ್ತದೆ. ಇತರ ಮತಗಳು ದುಃಖವನ್ನು ದೂರಮಾಡಿ ಸುಖಾಪೇಕ್ಷೆಗಾಗಿ 'ತತ್ವ'ವನ್ನು, ಅದನ್ನು ಪಡೆಯುವ ಫಲವಾದ 'ಪುರುಷಾರ್ಥ'ವನ್ನು, ಅದಕ್ಕಾಗಿ ಕ್ರಮಿಸುವ ಮಾರ್ಗವಾದ 'ಹಿತ'ವನ್ನು ವಿವಿಧ ಸಾಧನೋಪಾಯಗಳಿಂದ ಕಂಡುಕೊಂಡಿವೆಯಾದರೆ ವಿಶಿಷ್ಟಾದ್ವೈತ ಈ ಒಂದೊಂದಕ್ಕೂ ಪ್ರತ್ಯೇಕವಾಗಿ ಸಾಧನೆ ಮಾಡಬೇಕಾದ ಅಗತ್ಯವಿಲ್ಲವೆಂದೂ ಎಲ್ಲಕ್ಕೂ ಶ್ರೀಮನ್ನಾರಾಯಣನೊಬ್ಬನನ್ನೇ ಆಶ್ರಯಿಸಿದರೆ ಸಾಕೆಂದೂ ಎಲ್ಲವನ್ನೂ ಅವನೇ ಕರುಣಿಸುತ್ತಾನೆಂದೂ 'ಏಕನಿಷ್ಠ ದೇವೋಪಾಸನೆ'ಯನ್ನು ವಿಶಿಷ್ಟವಾಗಿ ಪ್ರತಿಪಾದಿಸಿದೆ. ಮೋಕ್ಷಕ್ಕೆ ಅತ್ಯಂತ ಸರಳ - ಸುಲಭ ಉಪಾಯವಾಗಿ 'ಪ್ರಪತ್ತಿ' ಅಥವಾ 'ಧ್ಯಾನ'ದ ಮಾರ್ಗವನ್ನು ಹೇಳುತ್ತದೆ. ಇದರ ಸಾಧನೆಗೆ ಹರಿನಾಮಸ್ಮರಣೆಯಷ್ಟೇ ಸಾಕೆನ್ನುತ್ತದೆ.

**೨. ಪ್ರಪತ್ತಿ – ಶರಣಾಗತಿ:** ಇತರ ಧರ್ಮಗಳಲ್ಲಿ ಮೋಕ್ಷಪಡೆಯಲು ಹಲವು ಜನ್ಮಗಳನ್ನು ಅನುಭವಿಸಬೇಕಾಗುತ್ತದೆ. ಪಾಪಶೇಷಗಳು ಕಳೆಯುವವರೆಗೂ ಜೀವಕ್ಕೆ ಮುಕ್ತಿಯಿಲ್ಲ. ಅಲ್ಲಿಯವರೆಗೆ ಸಾಧನೆ ಮಾಡುತ್ತಲೇ ಇರಬೇಕಾಗುತ್ತದೆ. ಆದರೆ ಶ್ರೀವೈಷ್ಣವ ಧರ್ಮದಲ್ಲಿ ಮನುಷ್ಯಜನ್ಮವೇ ಸರ್ವಶ್ರೇಷ್ಠ ಮತ್ತು ಜನ್ಮಾಂತರ ವಿಕಾಸದಲ್ಲಿ ತುಟ್ಟತುದಿಯದು. ಇಲ್ಲಿಂದ ಎಂದಿಗೂ ನಾಶವಿಲ್ಲದ, ಶಾಶ್ವತವಾದ, ಜ್ಞಾನಾಲನಂದ ಮಯವಾದ ವೈಕುಂಠ ಸೇರುವುದೇ ಮೋಕ್ಷದ ಸ್ಥಿತಿ. ಅದಕ್ಕಾಗಿ ಕ್ಲಿಷ್ಟಕರವಾದ ಹಲವು 'ಯೋಗ'ಗಳನ್ನು ಅನುಸರಿಸಬೇಕಾಗಿಲ್ಲ. ಶ್ರೀಮನ್ನಾರಾಯಣನಲ್ಲಿ ಪ್ರಪತ್ತಿ ಅಥವಾ ಶರಣಾಗತಿ ಅಥವಾ ಭರನ್ಯಾಸ ಮಾಡುವುದು ಅತ್ಯಂತ ಸುಲಭ ಉಪಾಯ.ಜೀವನು ಸಂಪೂರ್ಣವಾಗಿ ಪರಮಾತ್ಮನಲ್ಲಿ ಶರಣಾದರೆ ಅವನ ಹೊಣೆ ಆ ಪರಮಾತ್ಮನಿಗೆ ಸೇರುವುದು. ಅವನು

ಮೋಕ್ಷವನ್ನು ಕರುಣಿಸುತ್ತಾನೆ. ಜಗತ್ತಿಗೆ ಮಾತಾ ಪಿತೃಗಳಾದ ಲಕ್ಷ್ಮೀ - ನಾರಾಯಣರು ಅಭಯ ನೀಡುತ್ತಾರೆ. ಕರುಣೆ ತೋರುತ್ತಾರೆ. ವೈಕುಂಠದಲ್ಲಿ ಸೇರಿಸುತ್ತಾರೆ ಎಂದು ನಂಬುವುದೇ ಶ್ರೀವೈಷ್ಣವ ಧರ್ಮ. ಈ ಪ್ರಪತ್ತಿ ಧರ್ಮವನ್ನು ಈ ಎರಡು ಶ್ಲೋಕಗಳು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ.

*ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೆ*
*ಅಭಯಂ ಸರ್ವಭೂತೇಭ್ಯೋ ಪರಮ್ಯೈತದ್ವತಂಮಮ*
- ಶ್ರೀರಾಮ, ರಾಮಾಯಣ

(ಒಂದು ಬಾರಿ ನನ್ನಲ್ಲಿ ಪ್ರಪತ್ತಿಯನ್ನು ಮಾಡಿದರೆ, ಎನ್ನವನೆಂದು ಯೋಚಿಸುವ ಸರ್ವಭೂತಗಳಿಗೂ ಅಭಯವನ್ನು ಕೊಡುತ್ತೇನೆ.)

*ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ*
*ಅಹಂ ತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ //*
- ಶ್ರೀಕೃಷ್ಣ, ಭಗವದ್ಗೀಥೆ.

(ಸಮಸ್ತ ಉಪಾಯಗಳನ್ನು (ಅನ್ಯ ಧರ್ಮ, ದೈವೋಪಾಸನೆಗಳನ್ನು) ಬಿಟ್ಟು ನನ್ನೊಬ್ಬನಲ್ಲಿಯೇ ಶರಣಾದರೆ ನಾನು ನಿನ್ನನ್ನು ಸಮಸ್ತ ಪಾಪಗಳಿಂದಲೂ ಮುಕ್ತನನ್ನಾಗಿಸುತ್ತೇನೆ.)

ಪ್ರಪತ್ತಿಯೋಗ ಶ್ರೀವೈಷ್ಣವ ಧರ್ಮದ ಏಕೈಕ ಸಾಧನಕ್ರಮ. ಜ್ಞಾನ, ಭಕ್ತಿ, ಯಜ್ಞ, ಕರ್ಮ ಯೋಗಗಳಿಗಿಂತ ಈ ಶರಣಾಗತಿಯೋಗವನ್ನೇ ಇದು ಸುಲಭೋ ಪಾಯವಾಗಿ ಸ್ವೀಕರಿಸಿದೆ. ಮೋಕ್ಷವನ್ನು ಬಯಸುವ ಜೀವನಾದ ಮುಮುಕ್ಷು ಭಗವಂತನಲ್ಲಿ ಸಂಪೂರ್ಣ ಶರಣಾಗಿ ನಾಮಸ್ಮರಣೆ ಮಾಡಿದರೂ ಸಾಕು ಅವನು ಕೃಪೆದೋರುತ್ತಾನೆನ್ನುವ ಈ ಉಪಾಯವು ದೇವರನ್ನು ಬಯಸುವ ಜಗತ್ತಿನಲ್ಲಿರುವ ವಿಧಾನಗಳಲ್ಲೆಲ್ಲ ಅತಿಸುಲಭ ವಿಧಾನವೆನಿಸಿದೆ ಎಂದು ಚಿಂತಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಧ್ಯಾನ ಧಾರಣನಾಗಬೇಕಂತೆ ಪ್ರಪಂಚದೊಳಗೆ ದೀನ ನಾನದೊಡೆ ಮುಖ್ಯಸಾಕಂತೆ' (ಅಹೋಬಲದಾಸ) ಎಂಬಷ್ಟು ಸರಳವಾಗಿ ಇದು ಜನಪ್ರಿಯವಾಗಿದೆ.

**೩ ಮಹಾಲಕ್ಷ್ಮೀ ಪ್ರಾಧಾನ್ಯತೆ ಮತ್ತು ವಿಶ್ವಕ್ಸೇನ ಕಲ್ಪನೆ:** ವಿಶಿಷ್ಟಾದ್ವೈತ ತತ್ವವನ್ನು ಶ್ರೀಮನ್ನಾರಾಯಣನಿಂದ ಉಪದೇಶ ರೂಪದಲ್ಲಿ ತಿಳಿದುಕೊಂಡು ಶ್ರೀಮಹಾಲಕ್ಷ್ಮೀ ವಿಶ್ವಕ್ಸೇನರಿಗೆ ಉಪದೇಶ ಮಾಡಿದಳೆಂದೂ ವಿಶ್ವಕ್ಸೇನರಿಂದ ನಾರದಾದಿ ಭಗವದ್ಭಕ್ತರ ಮೂಲಕ ಜಗತ್ತಿಗೆ ಉಪದೇಶವಾಯಿತೆಂದೂ ಶ್ರೀವೈಷ್ಣವ ತತ್ವ ನಂಬುವುದರಿಂದಲೇ ಶ್ರೀಮಹಾಲಕ್ಷ್ಮೀ ಸಮೇತನಾದ ಶ್ರೀಮನ್ನಾರಾಯಣನನ್ನು ಅನುಸಂಧಾನ ಮಾಡುತ್ತದೆ. ಈ ಧರ್ಮದಲ್ಲಿ ನಾರಾಯಣನ ನಂತರ ಲಕ್ಷ್ಮಿಗೆ ಎರಡನೇ ಸ್ಥಾನ. ನಾರಾಯಣನ ಕೃಪೆ ದೊರಕಬೇಕಾದರೆ ಲಕ್ಷ್ಮಿಯನ್ನೇ ಮೊರಹೋಗಬೇಕು. ಲಕ್ಷ್ಮಿಯಿಲ್ಲದೆ ನಾರಾಯಣನಿಲ್ಲ. (ಇದು ಪುರುಷ ಪ್ರಾಧಾನ್ಯತೆಯನ್ನು ಹೊಂದಿರುವ ಆರ್ಯಸಂಸ್ಕೃತಿಗಿಂತ ಭಿನ್ನವಾದ ಸ್ತ್ರೀಸಮಾನತೆ, ಸ್ತ್ರೀಪ್ರಾಧಾನ್ಯತೆಯನ್ನು ಸಾರುವ ದ್ರಾವಿಡಸಂಸ್ಕೃತಿಯೂ ಆಗಿರುವಂತಿದೆ.) ಆದ್ದರಿಂದಲೇ ಹರಿಯನ್ನು 'ಶ್ರೀಹರಿ' ಎಂದು ಕರೆದಿರುವುದು ಮತ್ತು ಹರಿಯ ಎಲ್ಲ ರೂಪಗಳನ್ನು ಲಕ್ಷ್ಮೀ ಅಥವಾ ಶ್ರೀ ಸಮೇತವಾಗಿಯೇ ಕಲ್ಪಿಸಿರುವುದು. (ಲಕ್ಷ್ಮೀನಾರಾಯಣ, ಲಕ್ಷ್ಮೀವೆಂಕಟೇಶ್ವರ, ಲಕ್ಷ್ಮೀನರಸಿಂಹ, ಶ್ರೀಋಆಮ, ಶ್ರೀಕೃಷ್ಣ, ಶ್ರೀನಿವಾಸ, ಪ್ರಸನ್ನವೆಂಕಟರಮಣ ಇತ್ಯಾದಿ). ಶ್ರೀವೈಷ್ಣವ ಭಕ್ತರು ಲಕ್ಷ್ಮಿಯನ್ನು ತಾಯಿಯ ರೂಪದಲ್ಲೂ ವಿಷ್ಣುವನ್ನು ತಂದೆಯ ರೂಪದಲ್ಲೂ ಸ್ವೀಕರಿಸಿದ್ದಾರೆ. ತಾಯಿಯ ಮೂಲಕ ತಂದೆಯಿಂದ ತಮಗೆ ಬೇಕಾದ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಗನಂತಹ ಅತ್ಯಂತ ಸಹಜವಾದ ವಾತ್ಸಲ್ಯಮಯಭಾವ ಈ ಧರ್ಮದ ಜೀವ - ದೇವರ ನಡುವೆ ಕಂಡುಬರುತ್ತದೆ. ಹೀಗೆ ಲಕ್ಷ್ಮೀ ಸಮೇತ ಧರ್ಮವಾದ್ದರಿಂದ ಇದು 'ಶ್ರೀವೈಷ್ಣವ'ವಾಗುತ್ತದೆ.

ವಿಶ್ವಕ್ಸೇನರೇ ಜಗತ್ತಿನ ಜೀವಕೋಟಿಗೆ ಧರ್ಮದ ಮೂಲವಾಗಿರುವುದರಿಂದ ವಿಶ್ವಕ್ಸೇನರ ಆರಾಧನೆಗೆ ಈ ಧರ್ಮ ಮಹತ್ವ ಕೊಡುತ್ತದೆ. ವಿಶ್ವಕ್ಸೇನರನ್ನು 'ಕುಮುದಗಣೇಶ' ಎಂದೂ ಕರೆಯಲಾಗಿದೆ. ವೈಕುಂಠದಲ್ಲಿ ಸೇನಾಧಿಪತಿಯಾಗಿರುವ ಈ ವಿಶ್ವಕ್ಸೇನರನ್ನು ಒಲಿಸಿಕೊಂಡರೆ ಲಕ್ಷ್ಮಿನಾರಾಯಣರ ದರ್ಶನ ಸುಲಭವೆಂದು ಭಾವಿಸಲಾಗಿದೆ. ಆದ್ದರಿಂದಲೇ ಶ್ರೀವೈಷ್ಣವಧರ್ಮದಲ್ಲಿ ಗಣೇಶನ (ಗೌರೀಪುತ್ರ, ವಿಘ್ನನಾಶಕ, ಗಜಾನನ) ಪೂಜೆಯಿರುವುದಿಲ್ಲ. ಬದಲಿಗೆ ಈ ವಿಶ್ವಕ್ಸೇನರನ್ನೇ ವಿಘ್ನವಿನಾಶಕರನನ್ನಾಗಿ ಭಾವಿಸಿ ಪ್ರತಿಯೊಂದು ಕಾರ್ಯದಲ್ಲಿಯೂ ಮೊದಲು ಪ್ರಾರ್ಥಿಸಲಾಗುತ್ತದೆ. ಈ ವಿಶ್ವಕ್ಸೇನರಿಗೆ ಮೂರ್ತಿ ಪೂಜೆ ರೂಢಿಯಲ್ಲಿಲ್ಲ. ಮಂತ್ರಪೂಜೆ ಮಾತ್ರವಿದೆ. 'ಶುಕ್ಲಾಂಬರಧರಂ ವಿಷ್ಣುಂ..' ಎಂಬ ಪ್ರಸಿದ್ಧ ಶ್ಲೋಕ ವಾಸ್ತವವಾಗಿ ಈ ವಿಶ್ವಕ್ಸೇನರ ಪ್ರಾರ್ಥನೆಯೇ ಆಗಿದೆ. ಈಗ ನಂಬಿರುವಂತೆ ಗೌರಿಪುತ್ರ ಗಣೇಶನದಲ್ಲ. ಈ ಶ್ಲೋಕದಲ್ಲಿ ಗಜಮುಖಗಣೇಶನ ವರ್ಣನೆ ಬರುವುದಿಲ್ಲ. ವಿಷ್ಣುದೇವಾಲಯಗಳಲ್ಲಿರುವ ದ್ವಾರಪಾಲಕರ ರೂಪದಂತಿರುವ ಸುಂದರವದನದ ಈ ವಿಶ್ವಕ್ಸೇನರ ಸಂಕೇತವಾದ ವಿಘ್ನವಿನಾಶಕನ ವರ್ಣನೆಯಿದೆ.

**೪. ಶ್ರೀಹರಿಯ ರೂಪಭೇದಗಳು:** ಕೈವಲ್ಯ ಪದವಿಗಾಗಿ ಶ್ರೀಹರಿಯನೊಬ್ಬನನ್ನೇ ಈ ಧರ್ಮ ಸ್ವೀಕರಿಸಿದ್ದರೂ ಸಹ ಅವನಲ್ಲೇ ಸ್ವರೂಪಭೇದವನ್ನು ಕಲ್ಪಿಸಿದೆ. ಇತರ ಧರ್ಮಗಳಲ್ಲಿರುವಂತೆ ದೇವತಾ ತಾರತಮ್ಯ ಇಲ್ಲ. ಪರಾತ್ಪರನಾಗಿರುವ ಶ್ರೀಮನ್ನಾನಾರಾಯಣನ ಸ್ವರೂಪ ಐದು ಬಗೆಯಾಗಿದ್ದು ಅವನ್ನು ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾ ಎಂದು ಹೇಳಲಾಗಿದೆ. '**ಪರ**'ದಲ್ಲಿ ನಿತ್ಯ, ನಿರ್ವಿಕಾರ, ಲೋಕಾತೀತನಾದ ವಾಸುದೇವನನ್ನು ಮಾತ್ರ ಕಲ್ಪಿಸಲಾಗಿದೆ. '**ವ್ಯೂಹ**'ದಲ್ಲಿ ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನರನ್ನು ಇವರುಗಳ ಮೂಲಕ ದ್ವಾದಶನಾಮಗಳ ರೂಪವನ್ನು ಭಗವಂತನಿಗೆ ಹೆಸರಿಸಲಾಗಿದೆ. '**ವಿಭವ**'ದಲ್ಲಿ ಭಗವಂತನ ದಶಾವತಾರ ಗಳನ್ನು ಒಳಗೊಂಡು ೩೯ ಅವತಾರಗಳನ್ನು ಕಲ್ಪಿಸಲಾಗಿದೆ. ದಶಾವತಾರದಲ್ಲಿ ಪ್ರಚಲಿತವಿರುವ ಬುದ್ಧನನ್ನು ಶ್ರೀವೈಷ್ಣವಧರ್ಮ ತನ್ನ ತತ್ವಕ್ಕೆ ಅನುಗುಣವಾಗಿ ಸ್ವೀಕರಿಸಿಲ್ಲ. ಬದಲಿಗೆ ಬಲರಾಮ ಅಥವಾ ತ್ರಿಪುರಾಂತಕಹರಿ ರೂಪಗಳನ್ನು ಅನುಸಂಧಾನ ಮಾಡುತ್ತದೆ. '**ಅಂತರ್ಯಾಮಿ**' ರೂಪವು ಅಗೋಚರವಾದ ಯೋಗ ಸಿದ್ಧಿಯ ದಾರ್ಶನಿಕರಿಗೆ ಮಾತ್ರ ಕಾಣಸಿಗುವ ದರ್ಶನರೂಪ. ಇದು ಆಕಾರ ಬಣ್ಣ ಹೆಸರಿಲ್ಲದ ಇಡೀ ಜಗತ್ತನ್ನು ನಡೆಸುತ್ತಿರುವ ಒಂದು ಶಕ್ತಿ ವಿಶೇಷ. '**ಅರ್ಚಾ**' ರೂಪ ಸಾಮಾನ್ಯ ಭಕ್ತರ ಕಲ್ಪನೆಗೆ ಒಳಪಟ್ಟು ಆಲಯ - ಮನೆಗಳಲ್ಲಿ ಅರ್ಚಿಸಲ್ಪಡುವ ವಿಗ್ರಹರೂಪ. ಈ ಅರ್ಚಾರೂಪದ ಭಗವಂತ ಮಾತ್ರ ಭಕ್ತರ ಕೈಗೆ ಎಟುಕುವಂತಹುದು.

ಹೀಗೆ ಅನೇಕ ರೂಪಗಳಲ್ಲಿರುವ ಭಗವಂತ - ಶ್ರೀಹರಿಯು ಸಕಲ ಜೀವಕೋಟಿಗಳಲ್ಲಿ ಜೀವಾತ್ಮನ ರೂಪದಲ್ಲೂ ಇದ್ದಾನೆ. ಈ ಜೀವಿಗಳ ವ್ಯಾಪಾರ ಈ ಆತ್ಮ ಇರುವವರೆಗೆ ಮಾತ್ರ. ಶ್ರೀಮನ್ನಾರಾಯಣನೇ ಜಗತ್ತನ್ನು ನಡೆಸುವ ಸೂತ್ರಧಾರ. ಶ್ರೀಹರಿಯು ತನ್ನ ಸಂಕಲ್ಪದಿಂದ ಬ್ರಹ್ಮನನ್ನೂ ಅವನಿಂದ ರುದ್ರನನ್ನೂ, ಇಂಧ್ರಾದಿ ಸಕಲ ದೇವತೆಗಳನ್ನೂ ಸೃಷ್ಟಿಸಿ ಅವರವರಿಗೆ ನಿರ್ದಿಷ್ಟವಾದ ಲೋಕಕಲ್ಯಾಣ ಕಾರ್ಯವನ್ನು ನಿಯಮಿಸುತ್ತಾನೆ. ಈ ಒಬ್ಬೊಬ್ಬ ದೇವ - ದೇವತೆಗಳಿಗೂ ನಾರಾಯಣನು ನೇಮಿಸಿರುವ ಕಾರ್ಯಗಳಲ್ಲಿ ಮಾತ್ರ ಅಧಿಕಾರವಿರುತ್ತದೆ. ನಾರಾಯಣದ ಜಗತ್ತಿನ ಈ ರಕ್ಷಣಾಕಾರ್ಯ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಂತಿದೆ. ಪ್ರಧಾನಮಂತ್ರಿ ಮತ್ತು ಅವನ ಮಂತ್ರಿಮಂಡಲ; ಅವರಿಂದ ನೇಮಿಸಲ್ಪಡುವ ಅಥವಾ ಅವರಿಗೆ ಅಧೀನರಾದ ರಾಜ್ಯಗಳ ಮುಖ್ಯಮಂತ್ರಿ ಮತ್ತು ಸಚಿವ ಮಂಡಲವಿದ್ದಂತೆ. ಎಲ್ಲ ಅಧಿಕಾರವೂ ಸರ್ವಶಕ್ತನಾದ ಶ್ರೀಮನ್ನಾರಾಯಣನ ಕೈಯಲ್ಲಿರುತ್ತದೆ. ಹೀಗೆ ಇಡೀ ಜೀವ - ಜಗತ್ತನ್ನು ನಾರಾಯಣಮಯವನ್ನಾಗಿ ಮಾಡಿ ಹರಿಸರ್ವೋತಮತ್ವನ್ನು ಸಾಧಿಸಿರುವುದು ಈ ಧರ್ಮದ ವೈಶಿಷ್ಟ್ಯ. ಅದಕ್ಕಾಗಿಯೇ ಇದು ಹರಿಏಕನಿಷ್ಠೆಯನ್ನು ಅನುಸರಿಸುವುದು.

**೫. ಪಂಚಸಂಸ್ಕಾರ:** ಈ ಧರ್ಮೀಯರು ಲೋಕದಲ್ಲಿ ಧರ್ಮಾನುಸರಣೆಯನ್ನು 'ಪಂಚ'ಸಂಸ್ಕಾರಭೂತವಾಗಿ ಸ್ವೀಕರಿಸಿರುತ್ತಾರೆ. ತಮ್ಮ ಭುಜಗಳ ಮೇಲೆ ಭಗವಂಥನ ಚಿಹ್ನೆಗಳಾದ ಶಂಖಚಕ್ರಗಳನ್ನು ಧಾರಣಮಾಡಿಕೊಳ್ಳುವ '**ತಾಪ**'; ಹಣೆಯ ಮೇಲೆ ಮತ್ತು ದೇಹದ ೧೨ ಭಾಗಗಳಲ್ಲಿ ಎರಡು ಬಿಳಿಯ ನಾಮಗಳ ನಡುವೆ ಒಂದು ಶ್ರೀಚೂರ್ಣದ ಕೆಂಪು ನಾಮವನ್ನು ಧರಿಸುವ '**ಪುಂಡ್ರ**'; ಆಚಾರ್ಯರ ಮೂಲಕ 'ದಾಸ' ಎಂಬ ಅಂಕಿತವನ್ನು ಪಡೆಯುವ ಮೂಲಕ ಪ್ರಪತ್ತಿ ಅಥವಾ ಶರಣಾಗತಿಮಾರ್ಗದ ಸ್ವೀಕಾರದ '**ನಾಮ**'; ತತ್ವ - ಹಿತ ಪುರುಷಾರ್ಥಸಾಧಕಗಳ ರೂಪವೆನಿಸಿದ ರಹಸ್ಯತ್ರಯದ ಉಪದೇಶವಾದ '**ಮಂತ್ರ**' ಮತ್ತು ಆಂತರಿಕ ಮನಃಶುದ್ಧಿಯ ಇಂದ್ರಿಯನಿಗ್ರಹ ಹಾಗೂ ಬಾಹ್ಯ ಮನಃಶುದ್ಧಿಯ 'ಅರ್ಚಾ' ರೂಪಕ್ಕೆ ಪೂಜಾ ವಿಧಿಗಳನ್ನು ಸ್ವೀಕರಿಸುವ '**ಯಾಗ**' ಎಂಬ ಐದು ಸಂಸ್ಕಾರಗಳು ಶ್ರೀವೈಷ್ಣವ

ಧರ್ಮೀಯನಿಗೆ ಉಪನಯನ ಕಾಲದಲ್ಲೇ ಆಚಾರ್ಯಭಿಮುಖದಲ್ಲಿ ನಡೆಯುವುದರ ಮೂಲಕ ಪ್ರತಿಯೊಬ್ಬ ಶ್ರೀವೈಷ್ಣವನೂ ಸಂಸ್ಕಾರದ ಮೂಲಕ ದಾಸನೇ ಆಗಿರುತ್ತಾನೆ. ಅವರವರ ಪ್ರವರ ಹೇಳುವ ಕಾಲದಲ್ಲಿ ಪ್ರತಿಯೊಬ್ಬರೂ ತಮ್ಮ ಹೆಸರಿನ ಮುಂದೆ ದಾಸನ್ ಅಥವ ಶರ್ಮಣಃ ಎಂದು ಸೇರಿಸಿಕೊಳ್ಳುವುದು ಈ ಕಾರಣಕ್ಕಾಗಿಯೇ.

**೬. ಮಂತ್ರ ರಹಸ್ಯ:** ಈ ಪ್ರಪತ್ತಿಧರ್ಮದ ಸಾಧನೆಗಾಗಿ ಮುಮುಕ್ಷುವು ಆಚಾರ್ಯಭಿದಾನವಾಗಿರುವ 'ರಹಸ್ಯತ್ರಯ ಮಂತ್ರ'ವನ್ನು ಸದಾ ಅನುಸಂಧಾನ ಮಾಡಬೇಕೆಂಬ ನಿಯಮವಿದೆ. ಈ ರಹಸ್ಯತ್ರಯದಲ್ಲಿ ಮೂರು ಮಂತ್ರಗಳಿವೆ. (೧) ಮಂತ್ರರಾಜವೆನಿಸಿರುವ ಮೂಲಮಂತ್ರವಾದ ಅಷ್ಟಾಕ್ಷರಿಮಂತ್ರ: 'ಓಂ ನಮೋ ನಾರಾಯಣಾಯ'(೨) ದ್ವಯಮಂತ್ರವಾದ 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ ಶ್ರೀಮತೇ ನಾರಾಯಣಾಯ' ಹಾಗೂ (೩) ಚರಮಶ್ಲೋಕವೆನಿಸಿರುವ 'ಸರ್ವ ಧರ್ಮಾನ್ ಪರಿತ್ಯಜ್ಯ.....' ಎಂಬ ಭಗವದ್ಗೀತೆಯ ಶ್ಲೋಕ. ಇವುಗಳನ್ನು ಪ್ರತಿನಿತ್ಯ, ಪ್ರತಿಕ್ಷಣ ಅನುಸಂಧಾನ ಮಾಡಬೇಕೆಂದೂ ಇವು ಅತ್ಯಂತ ರಹಸ್ಯಮಂತ್ರಗಳಾಗಿರುವುದರಿಂದ ಇತರರಿಗೆ ಮತ್ತು ಗಟ್ಟಿಯಾಗಿ ಹೇಳಬಾರದೆಂದೂ ವಿಧಿಯಿದೆ. (ಈ ಮಂತ್ರಗಳನ್ನೇ ರಾಮಾನುಜರು ಗಿರಿಯಮೇಲೆ ನಿಂಥು ಜನಕ್ಕೆಲ್ಲ ತಿಳಿಯುವಂತೆ ಉದ್ಘೋಷ ಮಾಡಿ ಇದರ ಪ್ರಯೋಜನ ಸಾಮಾನ್ಯ ಜನರಿಗೂ ಸಿಗಲೆಂದು ಪ್ರಚಾರಮಾಡಿದ್ದು) ಈ ಮಂತ್ರಗಳ ಬಗ್ಗೆ ಶ್ರೀವೈಷ್ಣವ ಧರ್ಮಗ್ರಂಥಗಳಲ್ಲಿ ವಿಶೇಷವಾದ ವ್ಯಾಖ್ಯಾನಗಳಿವೆ. ರಾಮಾನುಜರೇ 'ರಹಸ್ಯತ್ರಯಸಾರ' ಎಂಬ ಗ್ರಂಥವನ್ನು ಬರೆದಿದ್ದಾರೆ. ಶ್ರೀವೈಷ್ಣವ ಧರ್ಮದ ತಿರುಳೇ ಇದರಲ್ಲಿದೆ.

**೭. ಆಳ್ವಾರರ ಪ್ರಬಂಧಗಳು:** ಶ್ರೀವೈಷ್ಣವಧರ್ಮದ ಈ ಸಿದ್ಧಾಂತಗಳಿಗೂ ಇತರ ಧರ್ಮಗಳಿಗೆ ಆಧಾರವಾಗಿರುವ ಪ್ರಸ್ಥಾನತ್ರಯಗಳೇ ಆಧಾರವಾದರೂ (ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ) ವಿಶಿಷ್ಟಾದ್ವೈತಕ್ಕೆ ಆಳ್ವಾರರ ಪ್ರಬಂಧಗಳೂ ಒಂದು ಹೆಚ್ಚಿನ ಆಧಾರವಾಗಿರುವುದರಿಂದ ಇದು 'ಪ್ರಸ್ಥಾನಚತುಷ್ಟಯ'ವೆನಿಸಿದೆ. ಕ್ರಿ.ಶ. ೭ ನೇ ಶತಮಾನದಿಂದ ೯ನೇ ಶತಮಾನದ ಅವಧಿಯವರೆಂದು ಇತಿಹಾಸಕಾರರು ಗುರುತಿಸಿರುವ ೧೨ ಜನ ಆಳ್ವಾರರು ಶರಣಾಗತಿಯ ಮೂಲಕ ಭಗವಂತನನ್ನು ವಿವಿಧ ರೀತಿಯಲ್ಲಿ ಭಾವನಾತ್ಮಕವಾಗಿ ಸ್ತುತಿಸಿರುವ ಹಾಡುಗಳಲ್ಲಿ ನಾಲ್ಕು ಸಾವಿರ ಪಾಶುರ(ಶ್ಲೋಕ)ಗಳನ್ನು ರಚಿಸಿದ್ದು ಇವುಗಳನ್ನು 'ನಾಲಾಯಿರ ದಿವ್ಯಪ್ರಬಂಧಗಳು' ಎಂದು ಕರೆಯಲಾಗಿದೆ. ಈ ಪ್ರಬಂಧಗಳಲ್ಲೂ ವೇದ - ಉಪನಿಷತ್ತು - ರಾಮಾಯಣ - ಮಹಾಭಾರತ - ಭಾಗವತ ವಿಶೇಷವಾಗಿ ಭಗವದ್ಗೀತೆಯ ಸಾರ ಅಡಗಿರುವುದರಿಂದ ಈ ಮತವನ್ನು ಸ್ಥಾಪಿಸಿದ ರಾಮಾನುಜಾಚಾರ್ಯರು ಇದನ್ನು ಒಂದು ಪ್ರಮಾಣವಾಗಿ ಸ್ವೀಕರಿಸಿ ಇದನ್ನೂ ವೇದಸಮಾನಗೊಳಿಸಿದ್ದಾರೆ. ಅನೇಕ ವಿಮರ್ಶಕರು ಈ ಪ್ರಬಂಧಗಳಲ್ಲಿ ವೈದಿಕ ಸಾಹಿತ್ಯದಲ್ಲಿಲ್ಲದ ಎಷ್ಟೋ ಹೊಸ ವಿಚಾರಗಳು ಇವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರತದಾದ್ಯಂತ ಧರ್ಮದ ಮೂಲವಾಗಿರುವ ವೈದಿಕ ಸಾಹಿತ್ಯಕ್ಕೆ ಸರಿಸಮನಾಗಿ, ಸ್ಥಳೀಯ ಭಾಷೆಯಲ್ಲಿರುವ ದ್ರಾವಿಡ ಪ್ರಬಂಧಗಳು ಧರ್ಮಸ್ಥಾಪನೆಗೆ ಮತ್ತು ದರ್ಶನ ವ್ಯಾಖ್ಯಾನಕ್ಕೆ ಆಕರವಾಗಿ ನಿಂತಿರುವುದು ಬಹುಶಃ ಇಲ್ಲೊಂದೇ ಕಡೆ ಎನಿಸುತ್ತದೆ. ಆರ್ಯಸಂಸ್ಕೃತಿಗಿಂತ ಭಿನ್ನವಾದ ದ್ರಾವಿಡ ಸಂಸ್ಕೃತಿಯೊಂದು ಈ ದೇಶದಲ್ಲಿ ಅತ್ಯಂತ ಶಕ್ತಿಯುತವಾಗಿ ಮತ್ತು ಗಟ್ಟಿಯಾಗಿ ಬೇರೂರಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಆಳ್ವಾರರುಗಳೆಲ್ಲ ಸಾಮಾನ್ಯ ಜನವರ್ಗದ ಪ್ರತಿನಿಧಿಗಳಾಗಿದ್ದು ಇವರಲ್ಲಿ ವೈದಿಕರಲ್ಲದೆ ಇತರ ಜಾತಿಯವರೂ - ಅಂತ್ಯಜರೂ ಕ್ಷತ್ರಿಯರೂ ಮಹಿಳೆಯರೂ - ಇರುವುದು ವಿಶೇಷ, ಧರ್ಮೋಪದೇಶ ಮತ್ತು ದೈವಸಾಕ್ಷಾತ್ಕಾರ ಕೇವಲ ವೇದಪಾರಂಗತರಿಗೆ ಮಾತ್ರ ಎಂಬ ಆರ್ಯಮತದ ಸಿದ್ಧಹೇಳಿಕೆಯನ್ನು ಬದಲಾಯಿಸಿದ ಸ್ಥಿತಿಗೆ ಮತ್ತು ಧರ್ಮದ ಹೊಸ ವ್ಯಾಖ್ಯಾನಕ್ಕೆ ಇದು ದಾರಿ ಮಾಡಿಕೊಟ್ಟಿದೆ. ಈ ಆಳ್ವಾರರುಗಳ ಸಾಧನೆಯಾದ ಅತ್ಯಂತ ಸರಳ ಮತ್ತು ಸುಲಭವಾದ ಶರಣಾಗತಿಯ ತತ್ವ ಶ್ರೀವೈಷ್ಣವಧರ್ಮದ ಮುಖ್ಯ ತಿರುಳಾಗುವ ಮೂಲಕ ಇತರ ಧರ್ಮಗಳಿಂದ ಇದು ಸಹಜವಾಗಿ ಭಿನ್ನವಾಗಿ ಮತ್ತು ವಿಶಿಷ್ಟವಾಗಿ ನಿಲ್ಲುವಂತಾಗಿದೆ. ಈ ಧರ್ಮದಲ್ಲಿ ಬರುವ ೧೨ ಜನ ಆಳ್ವಾರರನ್ನು ಬೇರೆ ಬೇರೆ ಧರ್ಮಗ್ರಂಥಗಳಲ್ಲಿ ಬೇರೆ ಬೇರೆ ಕ್ರಮದಲ್ಲಿ ಗುರುತಿಸಿರುವುದು ಕಂಡು ಬರುತ್ತದಾದರೂ ಶ್ರೀವೈಷ್ಣವ ಸಂಪ್ರದಾಯದ ಮುಖ್ಯ ಗ್ರಂಥವಾದ 'ಗುರುಪರಂಪರಾ ಪ್ರಭಾವ' 'ಹೇಳುವ ಕ್ರಮವನ್ನೇ ಎಲ್ಲರೂ ಒಪ್ಪಿದ್ದು ಆ ಕ್ರಮ ಈ ರೀತಿ ಇದೆ.

೧. ಪೊಯ್‌ಗೈಯಾಳ್ವಾರ್

೨. ಪೂದತ್ತಾಳ್ವಾರ್

೩. ಪೇಯಾಳ್ವಾರ್

ಇವರನ್ನು ಮೊದಲಾಳ್ವಾರರೆಂದು ಕರೆಯಲಾಗಿದೆ. ಇವರ ಇತಿವೃತ್ತ, ಜಾತಿ, ಊರು ಇತ್ಯಾದಿಗಳೇನೂ ತಿಳಿದಿಲ್ಲ, ಇವರು ಮೂವರೂ ಒಂದೆಡೆ ಸಂಧಿಸಿದ್ದರೆಂದೂ ಮತ್ತು ಒಂದೇ ತೆರವಾದ ಜೀವನಕ್ರಮ, ಭಕ್ತಿಮಾರ್ಗ - ಹೊಂದಿದ್ದರೆಂದೂ ಹೇಳಲಾಗಿದ್ದು ಇವರನ್ನು 'ಪುಷ್ಪಜಾತರು' ಎಂದೇ ಗ್ರಹಿಸಲಾಗಿದೆ.

೪. ತಿರುಮಳಿಶೈಯಾಳ್ವಾರ್ (ತಿರುವಳ್ಳೈ ಊರಿನವರು, ಜಾತಿ ಗೊತ್ತಿಲ್ಲ)

೫. ಕುಲಶೇಖರಾಳ್ವಾರ್ (ಕ್ಷತ್ರಿಯರು, ಕೇರಳದ ತಿರುವಾಂಕೂರಿನ ರಾಜ)

೬. ಪೆರಿಯಾಳ್ವಾರ್ (ಭಟ್ಟನಾಥ ಎಂಬ ಪರ್ಯಾಯ ನಾಮವಿರುವ ಶ್ರೀವಿಲ್ಲಿ ಪುತ್ತೂರಿನ ಬ್ರಾಹ್ಮಣರು)

೭. ಆಂಡಾಳ್ (ಗೋದಾದೇವಿ, ಪೆರಿಯಾಳ್ವಾರರ ಸಾಕುಮಗಳು)

೮. ತೊಂಡರಡಿಪ್ಪೊಡಿಯಾಳ್ವಾರ್ (ಭಕ್ತಾಂಘ್ರಿರೇಣು, ವಿಪ್ರನಾರಾಯಣ ಎಂದು ಹೆಸರುಗಳೂ ಇರುವ ಮಂಡಂಗುಡಿಯ ಬ್ರಾಹ್ಮಣರು)

೯. ತಿರುಪ್ಪಾಣಾಳ್ವಾರ್ (ತಿರುಪ್ಪಾಣಿ, ಯೋಗಿವಾಹನ ಹೆಸರುಗಳೂ ಇರುವ ಉರ್ರೈಯೂರಿನ ಅಂತ್ಯಜರು)

೧೦. ತಿರುಮಂಗೈ ಆಳ್ವಾರ್ (ನೀಲ ಹೆಸರೂ ಇರುವ ತಿರುಮಂಗೈ ಊರಿನ ಕಳ್ಳರ್ ಜಾತಿಯ ಶೂದ್ರರು)

೧೧. ಮಧುರಕವಿಯಾಳ್ವಾರ್ (ತಿರುಕ್ಕೋಳೂರಿನ ಬ್ರಾಹ್ಮಣರು)

೧೨. ನಮ್ಮಾಳ್ವಾರ್ (ಷಡಗೋಪನ್, ಹೆಸರೂ ಇರುವ ತಿರುಕ್ಕುರುಗೂರಿನ ವೆಳ್ಳಾಳ ಜಾತಿಯ ಶೂದ್ರರು)

ಶ್ರೀವೈಷ್ಣವ ಧರ್ಮೀಯರು ಈ ಆಳ್ವಾರರನ್ನು ದೈವಸ್ಥಾನದಲ್ಲಿಟ್ಟು ಸ್ತುತಿಸುತ್ತಾರೆ. ಇವರ ಹಾಡುಗಳು ವೇದಸಮಾನವೆಂದು ಪರಿಗಣಿಸಲ್ಪಟ್ಟು ವಿಶಿಷ್ಟಾದ್ವೈತದ ದರ್ಶನ ಸಾಹಿತ್ಯವಾಗಿದೆ. ಈ ಧರ್ಮೀಯರ ಮನೆ - ದೇವಾಲಯಗಳಲ್ಲಿ ಇವರ ವಿಗ್ರಹಗಳು ಪೂಜಾರ್ಹವಾಗಿವೆ. ಇವರ ತಿರುನಕ್ಷತ್ರಗಳು ಪ್ರಮುಖ ಧಾರ್ಮಿಕ ಆಚರಣೆ - ಹಬ್ಬ - ಉತ್ಸವಗಳಾಗಿವೆ.

ಈ ೧೨ ಜನ ಆಳ್ವಾರರಲ್ಲಿ ಯೋಗಿಗಳಾಗಿರುವ ನಮ್ಮಾಳ್ವಾರರು ಪ್ರಧಾನ ಆಳ್ವಾರರಾಗಿ ಸ್ತುತಿಸಲ್ಪಟ್ಟಿದ್ದಾರೆ. ಈ ಎಲ್ಲ ಆಳ್ವಾರರ ಜೀವನ ವಿವರಗಳು ಅತ್ಯಂತ ಕುತೂಹಲಕರವಾಗಿದ್ದು ರೋಚಕ ಸಂಗತಿಗಳಿಂದ ಕೂಡಿವೆ. ಸಾಮಾನ್ಯ ಜನರಾಗಿ ರಾಗ - ಭಾವಗಳಿಗೊಳಗಾಗಿದ್ದವರೇ ಶರಣಾಗತಿ ಮೂಲಕ ಮೋಕ್ಷಮಾರ್ಗ ಹಿಡಿದು ದೈವಸಾಕ್ಷಾತ್ಕಾರ ಪಡೆದು ದೈವತ್ವಕ್ಕೇರಿದ ಸಂತಶ್ರೇಷ್ಠರಾಗಿದ್ದಾರೆ.

**ಈ. ಆಚಾರ್ಯ ಪರಂಪರೆ:** ಶ್ರೀವೈಷ್ಣವ ಮತವನ್ನು ಸ್ಥಾಪಿಸಿದವರು ರಾಮಾನುಜಾಚಾರ್ಯರಾದರೂ ಅವರೇ ಈ ಧರ್ಮದ ಮೊದಲ ಆಚಾರ್ಯರಲ್ಲ. ಅವರಿಗಿಂತ ಮೊದಲು ಹಲವು ಆಚಾರ್ಯರು ಆಗಿಹೋಗಿದ್ದಾರೆ. ಅವರಲ್ಲಿ ಮುಖ್ಯವಾಗಿ ಸ್ತುತಿಸುವ ಆಚಾರ್ಯರೆಂದರೆ ನಾಥಮುನಿಗಳು ಮತ್ತು ಯಾಮುನಾಚಾರ್ಯರು. ಆಳ್ವಾರರ ಪ್ರಬಂಧಗಳನ್ನೆಲ್ಲ ಸಂಗ್ರಹಿಸಿ ನಾಲಾಯಿರ ದಿವ್ಯಪ್ರಬಂಧ ರೂಪಕ್ಕೆ ತಂದವರು ನಾಥಮುನಿಗಳು. ಇವರು ಈ ಪ್ರಬಂಧಗಳನ್ನು ನಿತ್ಯಪಾರಾಯಣದಲ್ಲಿ, ಭಗವದಾರಾಧನೆಯಲ್ಲಿ ಬಳಕೆಗೆ ತರುವುದರ ಮೂಲಕ ಶ್ರೀವೈಷ್ಣವ ಧರ್ಮಕ್ಕೆ (ಉಭಯವೇದಾಂತ) ಎಂಬ ಹೆಸರನ್ನು ತಂದರು. ಉಭಯವೇದಗಳೆಂದರೆ ಚತುರ್ ವೇದಗಳು ಮತ್ತು ವೇದಸಮಾನವಾದ ಪ್ರಬಂಧಗಳು, ಇವರ ನಂತರ ಯಾಮುನಾಚಾರ್ಯರು ಈ ಧರ್ಮದ ಸಿದ್ಧಾಂತಸ್ಥಾಪನೆಗೆ ರಾಮಾನುಜರನ್ನು ನೇಮಿಸುವುದರ ಜೊತೆಗೆ ವಿಶಿಷ್ಟಾದ್ವೈತ ತತ್ವವನ್ನು ಎಲ್ಲೆಡೆ ಹರಡಿ ಕಂಚಿ, ಶ್ರೀರಂಗಗಳಂಥ ಪ್ರಮುಖ ಕೇಂದ್ರಗಳನ್ನು ರೂಪಿಸಿದ್ದರು. ಅನಂತರ ಬಂದ ರಾಮಾನುಜಾಚಾರ್ಯರು ಈ ಧರ್ಮವನ್ನು ಜನಮತವನ್ನಾಗಿ ಪರಿವರ್ತಿಸಿ ಸಮರ್ಥವಾದ ವ್ಯಾಖ್ಯಾನಗಳನ್ನು ರಚಿಸಿ ವೇದಾಂತದ. ಶಾಸ್ತ್ರಜ್ಞಾನದ ಸಂಪ್ರದಾಯದ ಜೊತೆಗೆ ಆಳ್ವಾರರ ಭಕ್ತಿ ಸಂಪ್ರದಾಯವನ್ನು ಸೇರಿಸಿ ದೇವ - ಜೀವರನ್ನು ಒಂದು ಗೂಡಿಸಿ ವಿಶಿಷ್ಟಾದ್ವೈತ ಸಿದ್ಧಾಂತವಾಗಿ ಸ್ಥಾಪಿಸಿದರಲ್ಲದೆ ಅದನ್ನು ಜನಪ್ರಿಯ ಗೊಳಿಸಿದರು.

ದಕ್ಷಿಣಭಾರತದಾದ್ಯಂತ ಪ್ರಚಾರ ಮಾಡಿ ತಿರುಪತಿ - ಮೇಲುಕೋಟೆ ಗಳನ್ನೂ ಕೇಂದ್ರಗಳನ್ನಾಗಿ ಮಾಡಿ ತಮಿಳುನಾಡಿನಲ್ಲಿ ಮಾತ್ರ ಇದ್ದ ಈ ಧರ್ಮವನ್ನು ಆಂಧ್ರ - ಕರ್ನಾಟಕಗಳಿಗೂ ವಿಸ್ತರಿಸಿ ಭಾರತದ ಪ್ರಮುಖ ವೈದಿಕಮತತ್ರಯಗಳಲ್ಲಿ ಒಂದನ್ನಾಗಿಸಿದರು. ಆದ್ದರಿಂದಲೇ ಈ ವಿಶಿಷ್ಟಾದ್ವೈತವನ್ನು 'ರಾಮಾನುಜದರ್ಶನ' ಎಂದೇ ಕರೆಯುವ ಸಂಪ್ರದಾಯವೂ ಇದೆ.

ಇವರ ನಂತರವೂ ಈ ಧರ್ಮ ಅನೂಚಾನವಾಗಿ ಬೆಳೆಯಲು ರಾಮಾನುಜರು ೭೪ ಪೀಠಗಳನ್ನು ನೇಮಿಸಿ ಅಸಂಖ್ಯಾತ ಶಿಷ್ಯಕೋಟಿಯನ್ನು ಸೃಷ್ಟಿಸಿದ್ದಾರೆ. ಈ ಆಚಾರ್ಯಪೀಠಗಳು ಈ ಧರ್ಮವನ್ನು ಇನ್ನಷ್ಟು ಜಿಜ್ಞಾಸೆಗೆ ಒಳಪಡಿಸಿವೆ. ಕನ್ನಡ ಹರಿದಾಸ ಸಾಹಿತ್ಯದಲ್ಲಿ ಕಂಡುಬರುವ ದಾಸಕೂಟ - ವ್ಯಾಸಕೂಟದಂತೆ ಇಲ್ಲೂ 'ತೇಂಗಲೆ' - 'ವಡಗಲೆ' ಸಂಪ್ರದಾಯಗಳು ಬೆಳೆದುನಿಂತಿವೆ. ವೇದಪ್ರಮಾಣವನ್ನೇ ಮುಖ್ಯವಾಗಿ ಪರಿಗಣಿಸುವ ಸಂಸ್ಕೃತ ಪ್ರಭಾವವನ್ನು ವಡಗಲೆ ಸಂಪ್ರದಾಯ ಹೇಳಿದರೆ ಆಳ್ವಾರರ ಪ್ರಬಂಧ ಪ್ರಮಾಣವನ್ನೇ ಮುಖ್ಯವಾಗಿರುವ ತಮಿಳು ಪ್ರಭಾವವನ್ನು ತೇಂಗಲೆ ಸಂಪ್ರದಾಯ ಪ್ರತಿಪಾದಿಸುತ್ತದೆ. ಇಂದು ಈ ಎರಡೂ ಸಂಪ್ರದಾಯಗಳಲ್ಲಿ ನೂರಾರು ಗುರುಪೀಠಗಳ ಆಶ್ರಯದಲ್ಲಿ ಈ ಧರ್ಮೀಯರು ವಿಶೀಷ್ಟಾದ್ವೈತವನ್ನು ಆಚರಿಸುತ್ತ, ಶ್ರೀವೈಷ್ಣವ ಧರ್ಮವನ್ನು ಪಾಲಿಸುತ್ತ, ರಾಮಾನುಜ ದರ್ಶನವನ್ನು ಪ್ರಚಾರ ಮಾಡುತ್ತಾ ಆಳ್ವಾರರ ಭಕ್ತಿಮಾರ್ಗದಲ್ಲಿ ಮುನ್ನಡೆಯುತ್ತಿದ್ದಾರೆ. ಇದರ ಸುಲಭೋಪಾಯವನ್ನು ಸ್ವೀಕರಿಸಿ ಸಮಾಜದ ಇತರ ಮತೀಯರೂ ಈ ಧರ್ಮಾನು ಯಾಯಿಗಳಾಗಿ ಇದರ ತತ್ವಗಳನ್ನನುಸರಿಸುವ ಮೂಲಕ ಇದನ್ನು 'ಜನಮತ'ವನ್ನಾಗಿಸಿದ್ದಾರೆ.

(೨)

**೬. ಶ್ರೀವೈಷ್ಣವ ಕೀರ್ತನಸಾಹಿತ್ಯದ ಲಕ್ಷಣಗಳು**

ಸದ್ಯಕ್ಕೆ ಲಭ್ಯವಿರುವ ಶ್ರೀವೈಷ್ಣವಕೀರ್ತನೆಗಳನ್ನು ಪರಿಶೀಲಿಸಿದಾಗ ಇವು ದ್ವೈತ ಮತ್ತು ಅದ್ವೈತಕ್ಕಿಂತ ಭಿನ್ನವಾದ ಪರಿಭಾಷೆಯಲ್ಲಿಯೇ ರಚನೆಯಾಗಿರುವುದು ಕಂಡುಬರುತ್ತದೆ. ಶ್ರೀವೈಷ್ಣವ ತತ್ವವಾದ ಶರಣಾಗತಿ ಮಾರ್ಗ ಅಥವಾ ಪ್ರಪತ್ತಿ ಧರ್ಮ ಈ ಕೀರ್ತನೆಗಳ ಮುಖ್ಯಭಾವ. ಸಾಮಾನ್ಯವಾಗಿ ದ್ವೈತವೆಂದರೆ ಹರನನ್ನು ಒಪ್ಪಿಕೊಂಡು ಹರಿಸರ್ವೋತ್ತಮತ್ವವನ್ನು ಹೇಳುವುದುದೆಂದೂ ಅದ್ವೈತವೆಂದರೆ ಹರಿ ಹರ ಅಭೇದವನ್ನು ಪ್ರತಿಪಾದಿಸುವುದೆಂದೂ ವಿಶಿಷ್ಟಾದ್ವೈತವೆಂದರೆ ಹರನಿರಾಕರಣೆ ಯೊಂದಿಗೆ ಹರಿಏಕನಿಷ್ಠೆಯನ್ನು ಸಾರುವುದೆಂದೂ ಗ್ರಹಿಸಬಹುದು. ಈ ತತ್ವಕ್ಕೆ ಅನು ಗುಣವಾಗಿಯೆ ಶ್ರೀವೈಷ್ಣವ ಕೀರ್ತನೆಗಳಿವೆ. ಇಲ್ಲಿಯ ಗುರುಸ್ತುತಿ ಕೀರ್ತನೆಗಳೆಲ್ಲ ಶ್ರೀವೈಷ್ಣವ ಆಳ್ವಾರರು ಮತ್ತು ಆಚಾರ್ಯರ ಸ್ತುತಿಗಳಾಗಿ ಕನ್ನಡಸಾಹಿತ್ಯಕ್ಕೆ ಹೊಸ ಪರಿಭಾಷೆಯನ್ನು ನೀಡಿರುವುದನ್ನು ನೋಡಬಹುದು. ಶ್ರೀವೈಷ್ಣವ ಧರ್ಮದ ಮುಖ್ಯ ಸಾಹಿತ್ಯವಿರುವುದು ತಮಿಳಿನಲ್ಲಾದ್ದರಿಂದ ಆ ಧಾರ್ಮಿಕಕೃತಿಗಳ ಉಲ್ಲೇಖ ಅಲ್ಲಿಯ ಭಕ್ತರಾದ ಆಳ್ವಾರ್ - ಆಚಾರ್ಯರ ಜೀವನದ ರಸಮಯ ಸಂಗತಿಗಳ ಸೂಚನೆ ಈ ಕೀರ್ತನೆಗಳಲ್ಲಿ ಧಾರಾಳವಾಗಿ ಕಂಡುಬರುತ್ತದೆ. ಹರಿಯ ಅದರಲ್ಲೂ ವಿಶೇಷ ವಾಗಿ ಕೇಶವಾದಿ ದ್ವಾದಶನಾಮಗಳ ಸ್ತುತಿ ಇಲ್ಲಿ ಎದ್ದು ಕಾಣುವ ಸಂಗತಿಯಾಗಿದೆ. ಪ್ರಪತ್ತಿ ಧರ್ಮದ ತಿರುಳಾದ ನಾಮಸ್ಮರಣೆ, ಮಂತ್ರಮಹಿಮೆ, ಆತ್ಮ ಸಮರ್ಪಣೆ, ವಿರಕ್ತಿ, ಲೋಕಸುಖನಿರಾಕರಣೆ, ದೀನತೆ, ದಾಸ್ಯಮನೋಭಾವ, ಗುರುಮುಖೇನ ಹರಿ ದರ್ಶನ, ಹರಿಪಾದ ಸೇವೆಯ ಏಕೈಕ ಹಂಬಲ ಇತ್ಯಾದಿ ಭಾವಗಳು ಈ ದಾಸರ ಕೃತಿಗಳಲ್ಲಿ ಮಡುಗಟ್ಟಿ ನಿಂತಿರುವುದನ್ನು ಯಾರಾದರೂ ಸುಲಭವಾಗಿ ಗುರುತಿಸಬಹುದು.

ಶ್ರೀವೈಷ್ಣವ ಕೀರ್ತನಕಾರರು ಹರಿದಾಸವೃತ್ತಿಯನ್ನು ವೃತ್ತಿಯನ್ನಾಗಿ ಸ್ವೀಕರಿಸಿ ದವರಲ್ಲ. ಪ್ರಪತ್ತಿಯ ಮಾರ್ಗವಾಗಿ ಕಂಡುಕೊಂಡವರು. ಯಾವುದೇ ಗುರುವಿನ ಮೂಲಕ ಅಂಕಿತವನ್ನಾಗಲೀ ದೀಕ್ಷೆಯನ್ನಾಗಲೀ ಪಡೆದಿಲ್ಲ. ಅರ್ಚಾ ಮೂರ್ತಿಯನ್ನೇ ಅಂಕಿತವಾಗಿಟ್ಟುಕೊಂಡು ಮೋಕ್ಷಸಾಧನೆಯ ರೂಪವಾದ ಭಗವ ನ್ನಾಮಸ್ಮರಣೆಯನ್ನು ಆತ್ಮ ನಿವೇದನೆಯ, ಆತ್ಮ ಸಮರ್ಪಣೆಯ ಮೂಲಕ ಮಾಡುವ ಅಂತರಂಗಭಕ್ತಿ ಈ ಕೀರ್ತನೆಗಳಲ್ಲಿ ಹೊರಹೊಮ್ಮಿದೆ. ಇವರಿಗೆ ಶ್ರೀಹರಿಯೇ ಗುರು, ತಂದೆ,ಅಂಕಿತ, ಆರಾಧ್ಯದೈವ, ಸರ್ವಸ್ವ. ಆದ್ದರಿಂದಲೇ ಇದರಲ್ಲಿ ಗುರು ಮುಖೇನ ಅಂಕಿತವನ್ನು ಹರಿದಾಸವೃತ್ತಿಯ, ದೀಕ್ಷೆಯನ್ನು ಸ್ವೀಕರಿಸಿರುವ ನಿದರ್ಶನಗಳು ಕಂಡು

ಬರುವುದಿಲ್ಲ. ಅದ್ವೈತ ಕೀರ್ತನಕಾರರಿಗೂ ಈ ಮಾತು ಅನ್ವಯವಾಗುವುದಲ್ಲದೆ ದ್ವೈತ ಕೀರ್ತನಕಾರರಲ್ಲೂ ಕೆಲವರಿಗೆ ಅನ್ವಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಹರಿದಾಸರು ಎಂಬ ಪದದ ಅರ್ಥವ್ಯಾಪ್ತಿಯನ್ನು ಪುನರ್ ವ್ಯಾಖ್ಯಾನಿಸಬೇಕಾದ ಅಗತ್ಯವಿದೆ.

ಈವರೆಗಿನ ಕೀರ್ತನಕಾರರ ಬಗೆಗಿನ ಅಧ್ಯಯನಗಳೆಲ್ಲ ಮಧ್ವ ಸಂಪ್ರದಾಯದ ಕೀರ್ತನೆಯ ಹಿನ್ನೆಲೆಯಲ್ಲೇ ನಡೆದಿರುವುದರಿಂದ ಮತ್ತು ಈಚೆಗೆ ಕನ್ನಡ ಸಾಹಿತ್ಯದಲ್ಲಿ ಮಧ್ವೇತರ ಸಂಪ್ರದಾಯಗಳೂ ಹೆಚ್ಚುಹೆಚ್ಚಾಗಿ ಕೂಡಿಕೊಳ್ಳುತ್ತಿರುವುದರಿಂದ ಹರಿದಾಸರನ್ನು ಗುರುತಿಸುವ ದೃಷ್ಟಿಕೋನವೇ ಬದಲಾಗಬೇಕಾಗಿದೆ. 'ಕ್ರಮಬದ್ಧವಾಗಿ ಗುರುವಿನಿಂದ ದಾಸದೀಕ್ಷೆಯನ್ನು, ಅಂಕಿತವನ್ನು, ವಿಠಲನಾಮವನ್ನು ಸ್ವೀಕರಿಸಿದವರಷ್ಟೇ ಹರಿದಾಸರು. ಉಳಿದವರು ತಮ್ಮ ನಾಮದ ಮುಂದೆ ದಾಸ ಎಂಬ ಪದವನ್ನು ಕೂಡಿಸಿಕೊಂಡವರಾದರೂ ಕೃತಿರಚನೆ ಮಾಡಿದ ಹರಿದಾಸರ ಶ್ರೇಣಿಗೆ ಸೇರುವುದಿಲ್ಲ'. (ಜಿ. ವರದರಾಜರಾವ್, ಶ್ರೀಪಾದರಾಜರ ಕೃತಿಗಳು ಪೀಠಿಕೆ) ಎಂಬಂತಹ ಭಿನ್ನತೆಯನ್ನು ತರುವ ಮನೋಭಾವದಿಂದ ದೂರಾಗಿ ಸಮಷ್ಟಿ ದೃಷ್ಟಿಯಿಂಧ ದ್ವೈತ ಅದ್ವೈತ ವಿಶಿಷ್ಟಾದ್ವೈತ ಭೇದವಿವಕ್ಷೆಯಿಲ್ಲದೆ ಸಮನಾಗಿ ನೋಡಬೇಕಾಗುತ್ತದೆ. ದೀಕ್ಷಾ ಬದ್ಧರಾದವರ ರಚನೆಗಳು ಮಾತ್ರ 'ಕೃತಿಗಳು" ಉಳಿದವರವು 'ಪದಗಳು' ಎಂಬಭೇದ ತೋರದೆ ಕೀರ್ತನೆಗಳ ರಚನೆ ಮಾಡಿರುವವರೆಲ್ಲರೂ ಕೀರ್ತನಕಾರರೇ, ಹರಿದಾಸರೇ, ಅವರ ರಚನೆಗಳೆಲ್ಲವೂ ಕೃತಿಗಳೇ, ಕೀರ್ತನೆಗಳೇ, ಹರಿದಾಸರ ಹಾಡುಗಳೇ ಎಂಬ ಧೋರಣೆಗೆ ಬರಬೇಕಾಗುತ್ತದೆ. ಇತ್ತೀಚೆಗೆ ವಿದ್ವಾಂಸರು ಇಂಥ ಪ್ರಯತ್ನ ಮಾಡುತ್ತಿರುವುದು ಆರೋಗ್ಯಕರ ಲಕ್ಷಣವಾಗಿದೆ.

"ಹರಿದಾಸ ಸಾಹಿತ್ಯ ಪ್ರಧಾನವಾಗಿ ಭಕ್ತಿಪರವಾದದ್ದು. ಭಗವದ್ಭಕ್ತನು ತನ್ನ ಆತ್ಮಶೋಧನೆಯನ್ನು ಮಾಡಿಕೊಂಡು ಭಗವಂತನ ಅನುಗ್ರಹಕ್ಕಾಗಿ ಹಗಲಿರುಳೂ ಹಂಬಲಿಸುತ್ತ, ಇಷ್ಟಾರ್ಥ ಸಿದ್ಧಿಯಾದಮೇಲೆ ತನ್ನ ದಿವ್ಯಾನುಭವವನ್ನು ಇತರರಿಗೂ ತಿಳಿಯಹೇಳಿ ಸಮಸ್ತರನ್ನೂ ಸಮಷ್ಟಿದೃಷ್ಟಿಯಿಂದ ಸಮೀಕ್ಷಿಸಿದಾಗ ಅಲ್ಲಿ ಆಯಾ ಹರಿದಾಸರ ಆತ್ಮಶೋಧನೆ, ಅಪರೋಕ್ಷಾನುಭವ, ಭಗವಂತನನ್ನು ಅವರು ಆರಾಧಿಸುವ ನಾನಾ ವಿಧಾನಗಳು ಮೊದಲು ನಮ್ಮ ಮನಸ್ಸನ್ನು ಸೆಳೆಯುತ್ತವೆ", (ಜಿ. ವರದರಾಜರಾವ್ ಶ್ರೀಪಾದರಾಜರ ಕೃತಿಗಳು ಪು.೧೦) ಎಂಬ ಹರಿದಾಸ ಸಾಹಿತ್ಯದ ಬಗೆಗಿನ ಸಾಮಾನ್ಯವಾದ ಅಭಿಪ್ರಾಯಕ್ಕೆ ಈ ಕೀರ್ತನೆಗಳು ಸಹಜವಾಗಿ ಸ್ಪಂದಿಸುತ್ತವೆ. ಈ ಹಿನ್ನೆಲೆಯಲ್ಲಿ ಹರಿದಾಸ ಸಾಹಿತ್ಯ ಮತ್ತು 'ಕೀರ್ತನೆಗಳು' ಅಥವಾ 'ಕೀರ್ತನ ಸಾಹಿತ್ಯ' ಎಂಬ ಪದಗಳನ್ನು ಸಮಾನಾರ್ಥಕಗಳಾಗಿ ಬಳಸಲಾಗಿದೆ.

ಈ ಕೀರ್ತನೆಗಳಲ್ಲಿ ಆತ್ಮನಿವೇದನೆ, ಭಕ್ತಿಭಾವನೆಗಳು ಬೇರೆ ಯಾವ ಕೀರ್ತನೆಗಳಿಗೂ ಕಡಿಮೆಯಿಲ್ಲದಂತೆ ಅಭಿವ್ಯಕ್ತವಾಗಿರುವುದನ್ನು ಕಾಣಬಹುದು. (ತತ್ವಪ್ರತಿಪಾದನೆ, ದಾರ್ಶನಿಕ ಕೃತಿಗಳೂ ಇಲ್ಲದಿಲ್ಲ). ಭಗವಂತನ ಸ್ತುತಿಯನ್ನು ವಿವಿಧರೂಪದಲ್ಲಿ ಅದರಲ್ಲೂ ವಿಶೇಷವಾಗಿ ದ್ವಾದಶನಾಮ ಮತ್ತು ದಶಾವತಾರ ರೂಪದಲ್ಲಿ ಭಕ್ತಿಪರವಶತೆಯಿಂದ ಮಾಡಿರುವುದು ಈ ಕೀರ್ತನಕಾರರ ವೈಶಿಷ್ಟ್ಯ, ಇವರಿಗೆ ಹರಿ, ನಾರಾಯಣ, ರಾಮ, ಕೃಷ್ಣ ಅತ್ಯಂತ ಪ್ರಿಯವಾದ ಭಗವನ್ನಾಮ. ಭಗವಂತನನ್ನು ಸದಾ ಧ್ಯಾನಿಸುತ್ತಾ ಆರಾಧಿಸುತ್ತ, ಗೀತೆ, ಸ್ತುತಿ, ಪ್ರಬಂಧಗಳನ್ನು ಅಧ್ಯಯನ ಮಾಡುತ್ತ ಹಗಲಿರುಳೂ ಅವನ ನಾಮಸ್ಮರಣೆಯಲ್ಲೇ ತಲ್ಲೀನರಾಗಿರುವ ಈ ಕೀರ್ತನಕಾರರು ಒಂದಲ್ಲ ಹಲವು ಬಾರಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡು ಧನ್ಯರಾಗಿದ್ದಾರೆ. ಆ ವಿಶೇಷ ದರ್ಶನವನ್ನು - ಕನಸನ್ನು - ತಮ್ಮ ಕೀರ್ತನೆಗಳಲ್ಲಿ ಹಿಡಿದಿಟ್ಟಿದ್ದಾರೆ.

ಇವರ ಕೀರ್ತನೆಗಳಲ್ಲಿ ಸಮಾಜದರ್ಶನ, ಬದುಕಿನಬವಣೆಯ ಚಿತ್ರಣ ಇತರ ಹರಿದಾಸರಿಗಿಂತ ಸ್ವಲ್ಪ ಕಡಿಮೆಯೇ ಆದರೂ ಲೋಕನೀತಿಯನ್ನು ಹೇಳುವಲ್ಲಿ, ಸಾಮಾಜಿಕ ವಿಡಂಬನೆ ಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಅತ್ಯಂತ ಸೂಕ್ಷ್ಮಜ್ಞರಾಗಿ ಹಲವಾರು ಅಪರೂಪದ ಮತ್ತು ನೂತನ ಪ್ರತಿಮೆಗಳ ಮೂಲಕ ಸಮಕಾಲೀನ ಸಮಾಜವನ್ನು ಸಾಮಾಜಿಕ ಸ್ವರೂಪವನ್ನು ಹಿಡಿದಿಡುತ್ತಾರೆ. ಪುರಂದರದಾಸರಷ್ಟೇ ಸಮರ್ಥವಾಗಿ ಆದರೆ ಅವರಿಗಿಂತ ಭಿನ್ನವಾಗಿ 'ರಾಫಿ' ಪ್ರತಿಮೆಯನ್ನು ದುಡಿಸಬಲ್ಲವರಾಗಿದ್ದಾರೆ. ಕುದುರೆ, ಯೋಗ, ಮಾತ್ರೆ, ತಾಳ, ರಸಾಯನ, ಸುರಾಪಾನ, ವೃಕ್ಷ, ಮುತ್ತು - ರತ್ನಗಳು, ಅಳು, ನಗು, ನಂಬಿಕೆ, ಹೀಗೆ ಹಲವು ಪ್ರತಿಮೆಗಳನ್ನು ಚಮತ್ಕಾರವಾಗಿ, ತಾತ್ವಿಕವಾಗಿ, ದಾರ್ಶನಿಕವಾಗಿ ಕಲ್ಪಿಸಿ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಪ್ರಪತ್ತಿಯ ಮೂಲಕ ದೇವನಲ್ಲಿ ಸಂಪೂರ್ಣ ಶರಣಾಗತರಾಗಿ ಸಮಸ್ತವೂ - ತನ್ನ ರಕ್ಷಣೆಯೂ - ಭಗವಂತನದೆಂಬ ದಾಸ್ಯ ಭಾವದಲ್ಲಿದ್ದರೂ ಬದುಕಿನ

ಜಂಜಾಟಗಳನ್ನು, ಸಮಾಜದ ದುಷ್ಕೃತ್ಯಗಳನ್ನು, ಮೌಲ್ಯಗಳ ಅಧಃಪತನಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸುವ ಮೂಲಲಕ ಸಾಮಾಜಿಕ ಸ್ಪಂದನದಲ್ಲೂ ಇವರು ಹಿಂದೆ ಬಿದ್ದಿಲ್ಲ. ಆಚಾರ - ವಿಚಾರಗಳು, ನಡೆ - ನುಡಿ, ಕೌಟುಂಬಿಕ ವ್ಯವಸ್ಥೆ, ಮೇಲು - ಕೀಳು, ಜಾತಿ - ಕುಲ, ಮಾನವ ಸಂಬಂಧ ಹೀಗೆ ಹಲವು ಸಾಮಾಜಿಕ ದೃಷ್ಟಿಗಳು ಇವರ ಕೀರ್ತನೆಗಳಲ್ಲಿವೆ.

ಕೀರ್ತನ ಸಾಹಿತ್ಯದಲ್ಲಿ ಬರುವ ಸುಳಾದಿ, ಉಗಾಭೋಗ, ಮುಂಡಿಗೆ, ದಂಡಕ, ಮೂರ್ತಿಧ್ಯಾನ ಅಥವ ಚೂರ್ಣಿಕೆ, ಜಾವಳಿ, ಜಾನಪದ ಧಾಟಿ, ತತ್ವಪ;ದ, ಸೀಸಪದ ಹೀಗೆ ಎಲ್ಲ ಸ್ವರೂಪದ ಕೃತಿಗಳನ್ನೂ ಈ ಕೀರ್ತನಕಾರರೂ ರಚಿಸಿದ್ದಾರೆ. ಸರಳಶೈಲಿಯ ಕೀರ್ತನೆಗಳಿಂದ ಹಿಡಿದು ರಾಗ - ತಾಳ - ಪ್ರಾಸಬದ್ಧ, ಶಾಸ್ತ್ರನಿಷ್ಠ, ಸಂಗೀತ - ನಾಟ್ಯಪ್ರಧಾನಕೃತಿಗಳವರೆಗೆ ಕೀರ್ತನೆಗಳಿವೆ. ಜಾನಪದ ಶೈಲಿ, ಭಾವನಾತ್ಮಕ, ಬೋಧಪ್ರದ, ವರ್ಣನಾಪ್ರಧಾನ, ಭಾವಗೀತಾತ್ಮಕ, ಪ್ರಕೃತಿಚಿತ್ರಣ ಹೀಗೆ ಎಲ್ಲ ವಿಧದ ರಚನೆಗಳನ್ನೂ ಕಾಣಬಹುದು. ಕೆಲವರು ಕೇವಲ ಕೀರ್ತನಕಾರರಷ್ಟೇ ಅಲ್ಲದೆ ವಾಗ್ಗೇಯಕಾರರೂ ಆಗಿದ್ದಾರೆ. ಹಾಗೆಯೇ ಭಾಷಿಕವಾಗಿ ದೇಸೀಕನ್ನಡ - ಸಂಸ್ಕೃತ ಭೂಯಿಷ್ಟವಾದ ಕೃತಿಗಳ ಜೊತೆಗೆ ಭಿನ್ನ ಭಾಷೆಗಳ ಸಮ್ಮಿಶ್ರಣದಲ್ಲಿ ರಚನೆಯಾಗಿರುವ ಅತ್ಯಂತ ವಿಶಿಷ್ಟವಾದ ಕೀರ್ತನೆಗಳೂ ಇವೆ. ಇದರಿಂದ ಈವರೆಗಿನ ಕೀರ್ತನ ಸಾಹಿತ್ಯಕ್ಕೆ ಯಾವ ರೀತಿಯಲ್ಲೂ ಕಡಿಮೆಯಿಲ್ಲದಂತೆ, ಬದಲಿಗೆ ಸರಿಸಾಟಿಯಾಗುವಂತೆ ಶ್ರೀವೈಷ್ಣವ ಹರಿದಾಸ ಸಾಹಿತ್ಯವೂ ಇದೆ ಎಂಬುದನ್ನು ಸುಲಭವಾಗಿ ಗ್ರಹಿಸಬಹುದಾಗಿದೆ. ಕೀರ್ತನ ಸಾಹಿತ್ಯವನ್ನು ಸಾಮಾನ್ಯವಾಗಿ ವಿಭಾಗಿಸಬಹುದಾದ - ಅ) ಆತ್ಮ ನಿವೇದನೆ ಆ) ತತ್ವಪ್ರತಿಪಾದನೆ ಇ) ಉಪದೇಶಾತ್ಮಕ - ಈ) ಸಮಾಜದರ್ಶನ ಉ) ಕ್ಷೇತ್ರದರ್ಶನ - ಈ ಎಲ್ಲ ಮುಖ್ಯ ವಿಭಾಗಗಳಲ್ಲಿ ಈ ಕೀರ್ತನೆಗಳೂ ವಿಭಾಗಗೊಳ್ಳುತ್ತವೆಯಲ್ಲದೆ ಉಳಿದವುಗಳಿಗಿಂತ ಭಿನ್ನವಾಗಿ ಹರಿಏಕನಿಷ್ಠೆ, ಆಳ್ವಾರ್ - ಆಚಾರ್ಯ ಸ್ತುತಿ, ಶರಣಾಗತಿ - ಮಂತ್ರಮಹಿಮೆ, ನಾಮಸ್ಮರಣೆ, ಧ್ಯಾನಧಾರಣೆ, ದೈನ್ಯತೆಗಳ ಮೂಲಕ ತಮ್ಮ ವಿಶಿಷ್ಟತೆಯನ್ನು ಕಾಯ್ದುಕೊಳ್ಳುತ್ತವೆ. ಈ ವಿಶಿಷ್ಟಾದ್ವೈತ ಹರಿದಾಸ ಸಾಹಿತ್ಯಕ್ಕೇ ವಿಶಿಷ್ಟವಾದ ಲಕ್ಷಣಗಳನ್ನು ಸ್ಥೂಲವಾಗಿ ಹೀಗೆ ಗುರುತಿಸಬಹುದು.

**೧. ಶರಣಾಗತಿ/ಪ್ರಸತ್ತಿ**

ಶ್ರೀವೈಷ್ಣವ ಹರಿದಾಸಡರ ಎಲ್ಲ ಕೀರ್ತನೆಗಳೂ ಶರಣಾಗತಿ ತತ್ವದ ಲಕ್ಷಣವಾದ ಆತ್ಮಶೋಧನೆ, ದೈನ್ಯತೆ, ಆತ್ಮಸಮರ್ಪಣೆ, ಹರಿ - ಗುರುಪಾದಸೇವನೆಯ ಭಾವದಿಂದ ತುಂಬಿವೆ. ಈ ಶರಣಾಗತಿಭಕ್ತಿಯ ಮೂಲಕ ದೈವಸಾನ್ನಿಧ್ಯ ಸೇರಿರುವ ಪುರಾಣ ಪುರುಷರ, ಭಾಗವತಭಕ್ತರ ಪ್ರತಿಮೆಗಳನ್ನು ವಿವಿಧ ರೀತಿಯಲ್ಲಿ ಹೋಲಿಸಿಕೊಂಢು ಹರಿ ಧ್ಯಾನವೊಂದನ್ನೇ ಧಾರಣ ಮಾಡಿಕೊಂಡು ತಮ್ಮ ಅಸ್ತಿತ್ವವನ್ನು ನಿರಾಕರಿಸಿ, ಲೋಕಾಸಕ್ತಿಯನ್ನು ತ್ಯಜಿಸಿ, ದೈವದತ್ತ ತುಡಿಯುವುದೇ ಇವರ ಗುರಿ. ಲೌಕಿಕಾಸಕ್ತಿಯಿಲ್ಲದ, ಜೀವಸುಖ ಬೇಡದ, ಮರುಜನ್ಮವಿಲ್ಲದ, ಶಾಶ್ವತಮುಕ್ತಿಯ ಮಾರ್ಗದ ಸಾಧಕರಾಗಿ ಈ ದಾಸರು ನಿಲ್ಲುತ್ತಾರೆ.

ಈ ಶರಣಾಗತಿ ಧರ್ಮದ ಎಲ್ಲ ತಿರುಳನ್ನು ಅಹೋಬಲದಾಸರು ಈ ಕೃತಿಯಲ್ಲಿ ತತ್ವಪದದ ಧಾಟಿಯಲ್ಲಿ ಸೊಗಸಾಗಿ ಸ್ತುತಿಸಿದ್ದಾರೆ.

*ಧ್ಯಾನ ಧಾರಣನಾಗಬೇಕಂತೆ ಪ್ರಪಂಚದೊಳಗೆ*
*ದೀನನಾನಾದಡೆ ಮುಖ್ಯ ಸಾಕಂತೆ ಪ*

*ಪ್ರಾಣ ಪಾನ ಸಮಾನ ವ್ಯಾನವು*
*ಧ್ಯಾನ ಹೀಗೆಂದೆಂಬೊ ಪಂಚಕ*
*ನೀನೆ ನಿನ್ನೊಳು ಹುಡುಕಿ ದಿವ್ಯ*
*ಜ್ಞಾನಗುರುಗಳು ತೋರಿಸಿದು ನಿಜ ೧*

*ಆಗ ನೀನದ ಕಾಣಬಹುದಂತೆ ಆಧ್ಯಾತ್ಮ ಸತ್ಯವು*
*ಯೋಗವೆ ನಿಜ ತಾನಹುದಂತೆ*

*ಭಾಗವತಗಿದು ಮುಖ್ಯವೆನ್ನುತ*
*ಬಾಗಿನಡೆದ ಅವಿಜ್ಞನಿಗೆ ಅದು*
*ಭೋಗಿಭೂಷಣ ಸರ್ವ ಸಾಕ್ಷಿ ಸ -*
*ರಾಗ ಮುದ್ರೆ ಸಮಾಧಿ ಹೊಂದುವ    ೧*

*ಸ್ಮರಣೆ ನಿಂತೊಡೆ ಧ್ಯಾನ ಸಾಕಂತೆ ಅಭಯ ಪ್ರಸಿದ್ಧವು*
*ಕರಣನಿಗ್ರಹ ನಿನಗೆ ಬಹುದಂತೆ*
*ಧರಣಿ ಮದ್ಗುರು ತುಳಸಿರಾಮ ದಾ*
*ಸರಪ್ಪಣೆಗೊಳುಹಲಾತನ*
*ಚರಣ ಸೇವೆಯೊಳಿರುತಿಹುದೆ ನಿಜ*
*ಪರಮಪದವಿದು ಸತ್ಯನಿತ್ಯವು ೨*

ಇನ್ನೊಬ್ಬ ಹರಿದಾಸರಾದ ಆಸೂರಿರಾಮಸ್ವಾಮಿದಾಸರು ಹೀಗೆ ಹೇಳುತ್ತಾರೆ.

*ಶ್ರೀನಿವಾಸ ನಿನ್ನ ದಾಸನು ನಾನಲ್ಲವೇ*
*ಮಾನ ಪ್ರಾಣಗಳಿಗೆ ದೊರೆಯು ನೀನಲ್ಲವೇ*

ಎಂದು ಸರ್ವಸ್ವವನ್ನೂ ಭಗವಂತನಿಗರ್ಪಿಸಿ ಅವನ ಮತ್ತು ಅವನ ಭಕ್ತರ ಪಾದ ಸೇವನೆಮಾಡುತ್ತ ದೀನನಾಗಿ ನಡೆದುಕೊಳ್ಳುವ ಈ ತತ್ವದ ಭಕ್ತರೆಲ್ಲರ ಲೋಕಸುಖತ್ಯಾಗ ಹೀಗಿರುತ್ತದೆ.

*"ಧರೆಯ ರಾಜ್ಯವನೊಲ್ಲೆ ಸಿರಿಯ ಸಂಪದವೊಲ್ಲೆ*
*ಸುರರು ಭೋಗಿಪ ಸುರಪುರವ ನಾನೊಲ್ಲೆ*
*ಪರಮೇಷ್ಠಿಪುರದೊಳಗಿರಲು ನಾನೊಲ್ಲೆ ನಿನ್ನ*
*ಹೊರತಾದ ಕೈವಲ್ಯ ಸ್ಥಿರವೊಲ್ಲೆ ನಾ" (ಆಸೂರಿ)*

*ಆವಾವ ಪರಿಯಲಿ ರಾಮನಾಮವನು*
*ಆವ ಪರಿಯಲಿ ನೆನೆದು ಸುಖಿಯಾಗು ಮನವೆ (ಲಕ್ಷ್ಮೀಶ)*

*ಶ್ರೀನಿವಾಸನ ಮೂಲನಾಮವ ಸೊಗಸಿನಿಂದ*
*ದೀನನಾನು ಸಮಸ್ತಲೋಕಕೆ ದಾನಿ ನೀನು - (ಕನಕದಾಸರು)*
*ಗಾನ ಮಾಳ್ಪ ಧೀರನಾವನೋ (ವೆಂಕಟವರದಾರ್ಯ)*

*ಓಂ ನಮೋ ನಾರಾಯಣಾಯ*
*ಎನ್ನುವ ನಾಮದ ಬೀಜವನು ರಾ*
*ಮಾನುಜ ಬೆಳೆದ ಧರೆಯೊಳಗೆ (ನಾರಾಯಣಶರ್ಮ)*

*ಮೂಲಮಂತ್ರವ ಜಪಿಸು ಅರ್ಹತೆಯಿರುವಂತೆ (ಶಾಮಶರ್ಮ)*

*ತಿರುಮಂತ್ರದ್ವಯದರ್ಥವ ಬೋಧಿಸಿ (ರಂಗದಾಸ)*

ಮುಂತಾದ ಕೀರ್ತನೆಗಳಲ್ಲಿ ಈ ತತ್ವದ ಶರಣಾಗತಿಗೆ ಸಾಧನವಾದ "ಮಂತ್ರ ಮಹಿಮೆ", "ನಾಮ ಸ್ಮರಣೆಗಳು" ಹೇರಳವಾಗಿ ಗೋಚರವಾಗುತ್ತವೆ.

*ಸೃಷ್ಟಿನಾಥಪದಯುಕ್ತರ ಭಕ್ತಿಯು*
*ಕೊಟ್ಟರಭೀಷ್ಟವು ಎನಗಯ್ಯ*
*ಇಷ್ಟರ ಮೇಲಿನ್ನು ಲಕ್ಷ ಕೊಟ್ಟರು ಎನ*
*ಗಿಷ್ಟವಿಲ್ಲ ಶ್ರೀಕೃಷ್ಣಯ್ಯ (ವೆಂಕಟವರದಾರ್ಯ)*

ಎಂಬಷ್ಟು ಅಚಲವಾದ ನಿಷ್ಠೆ ಈ ದಾಸರ ಶರಣಾಗತಿಗೆ ಇದೆ. ತನ್ನನ್ನು ತಾನು ದೇವನಲ್ಲಿ ಅರ್ಪಿಸಿಕೊಂಡನೆಂದರೆ ಆ ನಿಷ್ಠೆಗೆ ಎಂದೂ ಕುಂದಾಗದಂತೆ ನಡೆದುಕೊಳ್ಳುವ ವ್ರತ ಈ ಪ್ರಪತ್ತಿ. ಅದಕ್ಕಾಗಿಯೇ ಅಸಾಧ್ಯವಾದ ದೈನ್ಯತೆ, ದಾಸ್ಯಪ್ರವೃತ್ತಿ, ತನ್ನದೇನೂ ಇಲ್ಲ ಎಂಬ ನಿವೃತ್ತಿ, ಬದುಕಿನ ನಿರಾಸಕ್ತಿ, ದೇವ - ದೈವಭಕ್ತರ ಪಾದಸೇವನೆ ಯೊಂದೇ ಮುಕ್ತಿಗೆ ದಾರಿ ಎಂಬ ಅಚಲ ನಂಬಿಕೆ ಈ ದಾಸರಲ್ಲಿ ಎದ್ದು ಕಾಣುವುದು ಈ ತತ್ವ ನಿಷ್ಠೆಯಿಂದಲೇ. (ಕನಕದಾಸರಲ್ಲೂ ಕಾಣುವುದು ಇದನ್ನೇ. ಕನಕದಾಸರು ವಿಶಿಷ್ಟಾದ್ವೈತ ತತ್ವಾನುಯಾಯಿಗಳೇ ವಿನಾ ಮಧ್ವ (ದ್ವೈತ) ತತ್ವಾನುಯಾಯಿಗಳಲ್ಲ. ಅದಕ್ಕಾಗಿಯೇ ಅವರು ಪುರಂದರದಾಸರಿಗಿಂತ ಭಿನ್ನವಾಗಿ ತೋರುವುದು).

ತನ್ನ ರಕ್ಷಣೆಯ ಹೊಣೆಯನ್ನು ಭಗವಂತನ ಮೇಲೆ ಹಾಕಿ ತಾನು ನಿಶ್ಚಿಂತನಾಗಿ (ತನ್ನ ರಕ್ಷಣೆಯಿಂದ ಮತ್ತು ಲೌಕಿಕ ಜೀವನದಿಂದ) ಶ್ರೀಹರಿಯೊಬ್ಬನನ್ನೇ ಧ್ಯಾನಿಸುತ್ತಾ ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವುದೇ ಪ್ರಪತ್ತಿಯ ಸಾಧನೆ. ತತ್ವ - ಹಿತ - ಪುರುಷಾರ್ಥಗಳೆಲ್ಲ ನಾರಾಯಣನ ನಾಮೋಚ್ಚಾರಣೆಯೇ. ಅನ್ಯ ಭಕ್ತಿಯ ಮಾರ್ಗವಿಲ್ಲದೆ, ಅನ್ಯ ದೈವಕಲ್ಪನೆಯಿಲ್ಲದೆ ಪರಮಾತ್ಮನೇ ಸರ್ವೋತ್ತಮನೆಂದು ನಂಬಿ, ಅವನ ಪ್ರಾಪ್ತಿಗಾಗಿ ಸರ್ವಸ್ವವನ್ನೂ ತ್ಯಜಿಸಿ, ಅವನ ಸಾಕ್ಷಾತ್ಕಾರವೇ ತನ್ನ ಜೀವಿತದ ಪರಮಗುರಿಯಾಗಿಸಿ, ಅವನ ಧ್ಯಾನವನ್ನೇ ಸದಾಕಾಲಮಾಡುತ್ತಾ ಇರುವುದೇ ಶರಣಾಗತಿ ಮಾರ್ಗದ ಧರ್ಮ. ಈ ಧರ್ಮದ ಪ್ರತಿಪಾದನೆಯಾಗಿ ಇವರ ಒಂದೊಂದು ಕೃತಿಗಳೂ ನಿಲ್ಲುತ್ತವಬೆ. ಇದರ ಸಾಧನೆಗಾಗಿ 'ರಹಸ್ಯತ್ರಯ ಮಂತ್ರ'ವನ್ನು ಅನುಸಂಧಾನಮಾಡುವುದೇ ಈ ಭಕ್ತನ ಉಪಾಸನೆ. ಈ ತತ್ವಗಳನ್ನು ಸಾರಿರುವ ಆಳ್ವಾರರ ಆಚಾರ್ಯರ ಸ್ತುತಿ ಮತ್ತು ನಾಮಮಹಿಮೆ ಇವರ ಕೃತಿಗಳಲ್ಲಿ ಮೇಲಿಂದಮೇಲೆ ಬರುತ್ತವೆ.

ಇವರ ಆತ್ಮನಿವೇದನೆಯ ಕೃತಿಗಳೂ ಈ ಸಮರ್ಪಣೆಯ ಭಾವದಿಂದ ಸಾರ್ಥಕತೆಯನ್ನು ಪಡೆದಿವೆ. ಅದು ಗರುಡ, ಹನುಮಂತ, ಲಕ್ಷ್ಮಣರಂತೆ ಕಷ್ಟಗಳನ್ನು ಸಂತೋಷವಾಗಿ ಅನುಭವಿಸುತ್ತ, ವಿರಾಮವಿಲ್ಲದೆ ಸೇವೆಗೈಯುತ್ತ ಆನಂದಿಸಬಹುದು. ಕೌಸಲ್ಯೆ, ದೇವಕಿ, ಯಶೋದೆ, ಪೆರಿಯಾಳ್ವಾರರಂತೆ ದೇವರನ್ನು ಮಗುವಾಗಿ ಭಾವಿಸಿ, ಪ್ರೀತಿಸಿ ಮಾತೃ ವಾತ್ಸಲ್ಯದ ಆರೈಕೆ ಮಾಡಬಹುದು. ಆಂಡಾಳ್, ರಾಧೆ, ನಮ್ಮಾಳ್ವಾರರಂತೆ ಭಗವಂತನನ್ನು ಪತಿ ಎಂದು ಭಾವಿಸಿ ಸತಿ - ಪತಿ ಭಾವದ ಪ್ರೇಮ - ವಿರಹದಲ್ಲಿ ಮುಳುಗಬಹುದು. ಬಲಿ, ತಿರುಪ್ಪಾಣಾಳ್ವಾರ್, ತೊಂಡರಡಿಪ್ಪಡಿ ಯಾಳ್ವಾರರಂತೆ ಸರ್ವಸ್ವವನ್ನೂ ಸಮರ್ಪಿಸಿ ಅಡಿಯಾಳಾಗಬಹುದು. ಅಂಬರೀಷ, ವಿಭೀಷಣ, ಸುಗ್ರೀವರಂತೆ ಶರಣಾಗತಿ ಮಾಡಬಹುದು. ಅರ್ಜುನನಂತೆ ಸಖನಾಗಿರಬಹುದು. ಪ್ರಹ್ಲಾದ, ಶುಕ, ಧ್ರುವ, ಜನಕರಂತೆ ಏಕಚಿತ್ತದಿಂದ ಸ್ತುತಿಸಿ ಕಾರುಣ್ಯ ಸಂಪಾದಿಸಬಹುದು; ಅಜಾಮಿಳ, ವಾಲ್ಮೀಕಿ, ಗಜೇಂದ್ರ ದ್ರೌಪದಿಯರಂತೆ ನಾಮಸ್ಮರಣೆ ಯಿಂದಲೇ ಇಚ್ಛಿಸಿದುದನ್ನು ಪಡೆಯಬಹುದು. ಕುಬ್ಜೆ, ಕುಚೇಲ, ವಿದುರ, ಶಬರಿ, ಗೋಪಿಕೆಯರು, ಶಿಬಿ, ಜಟಾಯು, ಅಕ್ರೂರ, ಅಹಲ್ಯೆಯರಂತೆ ಅನನ್ಯವಾಗಿ ಸ್ತುತಿಸುತ್ತಾ ದೈವದರ್ಶನಕ್ಕಾಗಿ ಕಾಯುತ್ತಾ ಮುಕ್ತಿಪಡೆಯಬಹುದು. ಹಿರಣ್ಯಾಕ್ಷ್, ಹಿರಣ್ಯಕಶಿಪು, ರಾವಣ, ಶಿಶುಪಾಲ, ದುರ್ಯೋಧನರಂತೆ ದ್ವೇಷಿಸುತ್ತ ನಿಂದಿಸುತ್ತಲೂ ದೇವರನ್ನು ಕಾಣಬಹುದು. ಹೀಗೆ ಎಲ್ಲ ರೀತಿಯ ದಿವ್ಯದರ್ಶನದ ಮಾರ್ಗಗಳನ್ನು ಶರಣಾಗತಿಯ ತಳಹದಿಯ ಮೇಲೆ ಕಲ್ಪಿಸಿಕೊಂಡು ಆತ್ಮವನ್ನು ಪರಿಪರಿಯಾಗಿ ದೇವರಿಗೆ ಸಮರ್ಪಿಸುತ್ತ ನವವಿಧಭಕ್ತಿಯ ಮೂಲಕ ಮೋಕ್ಷಕ್ಕಾಗಿ ಹಾತೊರೆಯುವುದೇ ಈ ಕೀರ್ತನಕಾರರ ಪರಮಗುರಿಯಾಗಿರುತ್ತದೆ. ಪುರಾಣ ಪ್ರತಿಮೆಗಳಿಲ್ಲದ ಕೀರ್ತನೆಗಳೇ ಇಲ್ಲ ಎನ್ನುವಷ್ಟು ಬಾಹುಳ್ಯದಿಂದ ಮೇಲಿನ ಎಲ್ಲ ಭಕ್ತರ, ಆಳ್ವಾರರ ನಿದರ್ಶನಗಳನ್ನು ಯಥೇಚ್ಛವಾಗಿ

ತರುತ್ತಾರೆ. ಮೇಲಿನ ಎಲ್ಲ ಭಕ್ತರ, ಆಳ್ವಾರರ ನಿದರ್ಶನಗಳನ್ನು ಯಥೇಚ್ಛವಾಗಿ ತರುತ್ತಾರೆ. ಭಗವಂತನ ಲೀಲಾವಿಲಾಸಗಳನ್ನು - ಅದು ಈ ಭಕ್ತರಿಗೆ ಒಲಿದದ್ದೂ ಆಗಿರಬಹುದು; ಶಿಷ್ಟ ನಿಗ್ರಹವಾಗಿರಬಹುದು; ಕೃಷ್ಣನ ಲೀಲೆಗಳಾಗಿರಬಹುದು - ಮನತುಂಬಿ ಸ್ತುತಿಸುವ ಭಾವಪರವಶತೆಯನ್ನು ಈ ಕೀರ್ತನೆಗಳಲ್ಲಿ ಕಾಣಬಹುದು.

ತತ್ವಪ್ರತಿಪಾದನೆಯನ್ನೇ ನೇರವಾಗಿ ಮಾಡಿರುವ ತಾತ್ವಿಕ, ದಾರ್ಶನಿಕ ಕೃತಿಗಳೂ ಪ್ರತ್ಯೇಕವಾಗಿ ಈ ಕೀರ್ತನಕಾರರಲ್ಲಿ ಕಂಡುಬಂದರೂ ಆತ್ಮ ನಿವೇದನೆಯ ಕೃತಿಗಳೆಲ್ಲವೂ ತತ್ವಪ್ರತಿಪಾದನೆಯ ಕೃತಿಗಳೂ ಆಗಬಲ್ಲವು. ಏಕೆಂದರೆ ಆತ್ಮ ನಿವೇದನೆಯ ಕೀರ್ತನೆಗಳನ್ನು ಈ ಕೀರ್ತನಕಾರರು ಶ್ರೀವೈಷ್ಣವ ತತ್ವವಾದ ಶರಣಾಗತಿಯ ತಳಹದಿಯ ಮೇಲೆಯೇ ಕಟ್ಟಿರುತ್ತಾರೆ. ಶ್ರೀವೈಷ್ಣವ ಮತಕ್ಕೆ ಈ ಪ್ರಪತ್ತಿಯೇ ಮೂಲಾಧಾರ, ಶರಣಾಗತಿ ಎಂಬುದು ಅತ್ಯಂತ ಸರಳವಾದ ಆದರೆ ಅಷ್ಟೆ ಕಠಿಣವಾದ ಭಕ್ತಿಯ ಮಾರ್ಗ. ಸುಖಾಪೇಕ್ಷೆ ತೊರೆದು ತನ್ನದೇನೂ ಇಲ್ಲವೆನ್ನುವ, ದೈನ್ಯತೆ ನಾನು ನಾನಲ್ಲವೆಂಬ ಸರ್ವಸಮರ್ಪಣ ಸ್ಥಿತಿ. ಕನಕದಾಸರ 'ದೀನ ನಾನು ಸಮಸ್ತಲೋಕಕೆ ದಾನಿ ನೀನು' ಈ ಸ್ತುತಿಯಲ್ಲಿ ಈ ಶರಣಾಗತಿಯೇ ಇರುವುದು.

**೧. ಆಳ್ವಾರ್ – ಆಚಾರ್ಯ ಸ್ತುತಿ**

ಶ್ರೀವೈಷ್ಣವ ತತ್ವಗಳನ್ನು ಅವುಗಳ ಒಳಗುಟ್ಟುಗಳನ್ನು ಅತ್ಯಂತ ಸರಳವಾಗಿ ನೇರವಾಗಿ ಸ್ಪಷ್ಟವಾಗಿ ಕೀರ್ತನಸಾಹಿತ್ಯದಲ್ಲಿ ತರುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ತತ್ವವನ್ನು ಸೊಗಸಾಗಿ ಮೂಡಿಸಿರುವ ಪ್ರಮುಖ ದಾಖಲೆಗಳಾಗಿ ಇವು ನಿಲ್ಲುತ್ತವೆ. ಶ್ರೀವೈಷ್ಣವ ತತ್ವದ ಎಲ್ಲ ಪ್ರಮೇಯಗಳನ್ನೂ ಇವುಗಳಲ್ಲಿ ತರಲಾಗಿದೆ. ಆಳ್ವಾರರು - ಆಚಾರ್ಯರು ಈ ಶ್ರೀವೈಷ್ಣವ ತತ್ವದ ಮೂಲ ಪ್ರತಿಪಾದಕರು. ಈ ತತ್ವಾನುಯಾಯಿಗಳಿಗೆ ಇವರೇ ಗುರುಗಳು. ಇವರನ್ನು ಹೊರತಾಗಿ ಅನ್ಯಗುರುಗಳ ಸ್ತುತಿ ಇವರಲ್ಲಿ ಕಂಡುಬರುವುದಿಲ್ಲ. ಇಲ್ಲಿಯ ಗುರುಸ್ತುತಿಯ ಇನ್ನೊಂದು ವಿಶೇಷ. ಈ ಗುರುಪರಂಪರೆಯನ್ನು ದೈವಸಮಾನವಾಗಿ ಸ್ವೀಕರಿಸಿರುವುದು, ಇವರ ಪಾದಸೇವನೆಯೇ ಮುಕ್ತಿಗೆ ದಾರಿ ಎಂಬ ಅಚಲನಂಬಿಕೆಯಿರುವುದು. ಈ ಆಳ್ವಾರಾಚಾರ್ಯರನ್ನು ಸ್ತುತಿಸುವ ದಾಸರನ್ನೂ ಗುರುಗಳಾಗಿ ಸ್ವೀಕರಿಸುವವರೆಗೂ ಈ ಭಾವವಿರುತ್ತದೆ. ಈ ಗುರುಸ್ತುತಿಯ ರೂಪದಲ್ಲಿರುವ ಆಳ್ವಾರ್ - ಆಚಾರ್ಯರ ಸ್ತುತಿ ಈ ಕೀರ್ತನೆಗಳ ಬಹಳ ಮುಖ್ಯ ವೈಶಿಷ್ಟ್ಯವಾಗಿದ್ದು, ಕನ್ನಡ ಕೀರ್ತನೆಗಳಿಗೆ ಹೊಸ ಓದನ್ನು, ಪರಿಕಲ್ಪನೆಯನ್ನು ಒದಗಿಸುವಲ್ಲಿ ಇದು ಯಶಸ್ವಿಯಾಗಿದೆ.

*'ಆಚಾರ್ಯ ಪ್ರಾಚಾರ್ಯ ಪರಮಾಚಾರ್ಯ'*
*ಆಳ್ವಾರ್ ತಿರುವಡಿಗಳೆ ಶರಣೆನ್ನುತ*
*ಬಾಳ್ವರು ಭಜಿಪುದು ಭಕುತಿಯಲಿ'*
*'ವಕುಳಾಭರಣನೆ ಶರಣೆಂಬೆ'*

*'ನಾಥವಾನಸ್ಮಿ ವಿಪ್ರನಾರಾಯಣೇನ'*
*'ಶ್ರೀಗೋದಾದೇವಿ ಶ್ರೀಭೂನೀಳಾ ಆಂಡಾಳ್ ದೇವಿ'*
*'ರಾಮಾನುಜಾಚಾರ್ಯ ಮೌನಿವರ್ಯ*
*ನೇಮದಿಂದಲಿ ಗೈದೆ ನಾಂ ಸ್ವಾಮಿಕಾರ್ಯ'*

ಮುಂತಾದ ಇನ್ನೂ ಹಲವು ಕೃತಿಗಳಲ್ಲಿ ಈ ಬಗೆಯ ನೂತನ ಗುರುಸ್ತುತಿ ಸ್ವರೂಪವನ್ನು ಕಾಣಬಹುದು.

**೨. ತತ್ವದರ್ಶನ:**

ವಿಶಿಷ್ಟಾದ್ವೈತ ಮತದ ಎಲ್ಲ ಪ್ರಮೇಯಗಳನ್ನೂ ಈ ಮುಂದಿನ ಕೃತಿಯು ಯಶಸ್ವಿಯಾಗಿ ಹಿಡಿದಿಟ್ಟಿರುವುದನ್ನು ನೋಡಬಹುದು.

*ವಿಶಿಷ್ಟಾದ್ವೈತ ಮತವೇ ಮತವು*
*ವಿಷ್ಣುಪದವೇ ಶಾಶ್ವತ ಪದವು ಪ.*

*ವಸಿಷ್ಠ ನಾರದ ಸನಕಾದಿವಂದ್ಯರ*
*ವಿಶಿಷ್ಟ ಪರಿಗ್ರಹ ವೇದಾಂತಸಾರದ ಅ.ಪ.*

*ಅಸೇತು ಹಿಮಾಚಲ ವಿಶೇಷದ*
*ವಿಶೇಷ ಪ್ರಮಾಣ ಚತುಷ್ಟಯದ ೧*
*ಚಿತ್ತು ಅಚಿತ್ತೀಶ್ವರ ತತ್ವವನು*
*ಪ್ರತ್ಯೇಕವಾಗಿಯೇ ಬೋಧಿಸಿಹ ೨*

*ಪರ ವ್ಯೂಹ ವಿಭವಾಂತರ್ಯ ಅರ್ಚಾ*
*ಪರಿಪರಿ ರೂಪದ ಶ್ರೀಹರಿ ಪೂಜನ ೩*

*ರಹಸ್ಯತ್ರಯ ಮಂತ್ರ ವಿಶಿಷ್ಟದ*
*ಸಹಮತ ಸುಲಭೋಪಾಯ ವಿಧಾನದ ೪*

*ಹರ ಅಜ ಸುರರೆಲ್ಲರು ಹರಿಮತ*
*ಹರಿಯೊಬ್ಬನ ಪಾದವೆ ಮೋಕ್ಷಪಥದ೫*

*ಪ್ರಪತ್ತಿಮಾರ್ಗದ ಪ್ರಧಾನ ಧರ್ಮದ*
*ಉಪವೃತ್ತಿಯ ಬೇಡದ ಶರಣಾಗತಿಯ ೬*

*ಸತತವು ಹೆಚ್ಚಾಜಿ ಕೇಶವನಾಮ*
*ನುತಿಸಿದವನ ಭವಬಂಧನ ಬಿಡಿಸುವ ೭ (ನಾರಾಯಣಶರ್ಮ)*

*'ನೀನಾರು ನಾನಾರು ನೀನೆನ್ನೊಳಿರಲು'*
*'ನೀನೆನ್ನೊಳಡಗಿಹೆಯೋ ರಂಗಯ್ಯ, ನಾನಿನ್ನೊಳಡಗಿಹೆನೊ,'*

ಮುಂತಾದ ಕೀರ್ತನೆಗಳ ಮೂಲಕ ದೇವ - ಜೀವಗಳ ಸಂಬಂಧದ ವಿಶಿಷ್ಟಾದ್ವೈತ ದೃಷ್ಟಿಯಾದ ಜೀವ - ಜಡಗಳೆರಡೂ 'ದೇವನಲ್ಲಿ ಲೀನವಾಗಿವೆ. ಇವುಗಳನ್ನು ವಿಶೇಷಣವಾಗಿ ಹೊಂದಿರುವ ವಿಶ್ವವ್ಯಾಪಕ ರೂಪ ಶ್ರೀಹರಿ' ಎಂಬುದನ್ನು ಈ ಕೀರ್ತನೆಗಳು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ. ಪುರಂದರದಾಸರು

*ಎರೆಡೂ ಒಂದಾಗದು ರಂಗ ಪ*
*ಎರಡು ಒಂದಾಗದು ಎಂದೆಂದಿಗು ರಂಗ ಅ.ಪ.*

*ಒಂದೆ ವೃಕ್ಷದಲಿ ಎರಡು ಪಕ್ಷಿಗಳು*
*ಒಂದೇ ಗೂಡಿನಲಿ ಇರುತಿಹವು...*

ಎಂದು ಸಾರುವ ದ್ವೈತಪ್ರತಿಪಾದನೆಯಂತೆ ಅಷ್ಟೇ ಸ್ಪಷ್ಟವಾಗಿ ಆಸೂರಿ ರಾಮಸ್ವಾಮಿ ದಾಸರು ವಿಶಿಷ್ಟಾದ್ವೈತ ತತ್ವವನ್ನು ಒಂದು ಕೃತಿಯಲ್ಲಿ ನಿರೂಪಿಸಿದ್ದಾರೆ.

*ಒಂದಿಲ್ಲದ ಮೇಲೆರಡುಂಟೆ ಭಕ್ತಿ*
*ಒಂದಲ್ಲದೆ ಹರಿಯೊಲವುಂಟೆ ಪ*

*ಒಂದಲ್ಲದೆ ರುಚಿ ಔಷಧಿಯುಂಟೆ*
*ನೊಂದಲ್ಲದೆ ರಂಗಾ ಎಂಬುವುದುಂಟೆ ಅಪ*
*ಗಿಡ ಮರವಾಗದೆ ಕೃಮಿಯಾಗುವೆನೆ*
*ಅಡವಿಯೊಳಿರದೆ ಗೋವಾಗುವೆನೆ*

*ಪಡೆಯದೆ ಪುಣ್ಯವ ನರನಾಗುವೆನೆ*
*ಮೃಡನ ಪೂಜಿಸದೆ ದ್ವಿಜನಾಗುವೆನೆ ೧*

*ಸುಗುಣವಿರದೆ ಮಾತಿನಿದಾಗುವುದೆ*
*ಸೊಗಮಿಲ್ಲದೆ ಬಾಯ್ ನಗದೋರುವುದೆ*
*ಸುಗುಣವಿಲ್ಲದೆ ನಿರ್ಗುಣಬಹುದೆ*
*ಮುಗಿಲಿಲ್ಲದೆ ಮಳಧರೆಗೆ ಬೀಳುವುದೆ ೨*

*ತಂಗಿದ್ದಲ್ಲದೆ ಭಾವ ಎಂಬೋದುಂಟೋ*
*ಹಂಗಿಲ್ಲದೆ ಮರೆ ಹಿತಕುಂಟೊ*
*ತಂಗಿನೋಡಲು ಭಾವ ಮರೆಯಹುದುಂಟೊ*
*ಮಾಂಗಿರಿರಂಗ ನೀನೆನ್ನಯ ನಂಟೊ ೩*

ದ್ವೈತ ಅದ್ವೈತಗಳ ಸಗುಣ - ನಿರ್ಗುಣಗಳನ್ನು ಸಮ್ಮಿಳನಗೊಳಿಸಿರುವ ವಿಶಿಷ್ಟಾದ್ವೈತವನ್ನು ಇಲ್ಲಿ ಬಹಳ ಸೊಗಸಾಗಿ ಸಾಧಿಸಿದ್ದಾರೆ. ಕನಕದಾಸರು 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ಕೀರ್ತನೆಯಲ್ಲಿ ನಿರೂಪಿಸಿರುವ ತತ್ವವೂ ಇದೇ ಆಗಿದೆ.

(೪)

**೪. ಹರಿಏಕನಿಷ್ಠೆ**

ಹರಿಏಕನಿಷ್ಠೆ ಈ ಧರ್ಮದ ಇನ್ನೊಂದು ಮುಖ್ಯ ಲಕ್ಷಣ. ಜಗತ್ತೆಲ್ಲವೂ ಹರಿಮಯ, ಅವನೇ ತಂದೆ, ಮಹಾಲಕ್ಷ್ಮಿಯೇ ತಾಯಿ. ಇವನನ್ನು ಹೊರತುಪಡಿಸಿ ಇನ್ನೊಂದು ದೈವವಿಲ್ಲ. ಇದ್ದರೆ ಇವನ ಅಧೀನ, ಅವರೆಲ್ಲ ಇವನು ನೇಮಿಸಿದ ಕಾರ್ಯಗಳನ್ನು ಮಾಡಬಲ್ಲವರಷ್ಟೇ. ಆದ್ದರಿಂದ ಅವರನ್ನು ಅನುಸರಿಸುವುದರಿಂದ ಹರಿ ಒಲಿಯುವುದಿಲ್ಲ: ಎಂಬ ಪ್ರಬಲವಾದ ನಂಬಿಕೆ - ಆಚರಣೆ ಈ ಧರ್ಮೀಯರಲ್ಲಿದೆ. ಆಧುನಿಕ ಸಮಾಜದಲ್ಲಿ ಈ ನಿಷ್ಠೆ ಅಷ್ಟಾಗಿ ಆಚರಣೆಯಿಲ್ಲಲ್ಲದಿದ್ದರೂ ಧರ್ಮನಿಷ್ಠರು ಇಂದಿಗೂ ಈ ತತ್ವಕ್ಕೆ ಬದ್ಧರಾಗಿದ್ದಾರೆ. ಶ್ರೀವೈಷ್ಣವಧರ್ಮೀಯರ ಮನೆಗಳಲ್ಲಿ ಇಂದಿಗೂ ಶ್ರೀಹರಿ ಮತ್ತು ಅವನ ಅವತಾರದ ನರಸಿಂಹ, ರಾಮ, ಕೃಷ್ಣ ಇತ್ಯಾದಿ ಹಾಗೂ ಅರ್ಚಾರೂಪದ ಶ್ರೀನಿವಾಸ, ರಂಗನಾಥ, ಚನ್ನಕೇಶವ ಇತ್ಯಾದಿ ಫೋಟೋಗಳನ್ನು ಬಿಟ್ಟರೆ ಅನ್ಯದೈವಗಳ ಫೋಟೋಗಳು ಕಂಡುಬರುವುದಿಲ್ಲ, ಗಣೇಶನದೂ ಕೂಡ. ಈ ಗಣೇಶನಿಗೂ ಈ ಧರ್ಮೀಯರಲ್ಲಿ ಬೇರೆಯದೇ ಕಲ್ಪನೆಯಿದೆ.

'ಕುಮುದಗಣೇಶ' 'ವಿಶ್ವಕ್ಸೇನ'ಹೆಸರಿನಲ್ಲಿ ವಿಷ್ಣುವಿನ ವೈಕುಂಠದ ಸೇನಾಧಿಪತಿಯನ್ನಾಗಿ ಕಲ್ಪಿಸಿಕೊಂಡು ಅವನನನ್ನು ವಿಘ್ನನಾಶಕನನ್ನಾಗಿ ಸ್ತುತಿಸಲಾಗುತ್ತದೆ. ಶಾಮ ಶರ್ಮದಾಸರು ಈ ಗಣೇಶನ ಬಗ್ಗೆ ಒಂದು ಸ್ವತಂತ್ರ ಕೃತಿಯನ್ನೇ ರಚಿಸಿದ್ದರೆ, ಉಳಿದವರು ಪ್ರತಿಮೆಯನ್ನಾಗಿಸಿದ್ದಾರೆ.

*'ಶ್ರೀನಾಥಾಜ್ಞಾಪ್ರಕಾರ ನಡೆಯುವ ಸೂತ್ರವತೀರಮಣ*
*ಮಾನಿತಪ್ರಧಾನಿಮಂತ್ರಿ ಪೂಜಿಪೆ ವಿಘ್ನೇಶಾ ನಮಿಪೆ'*

ಎಂದು ಆರಂಭವಾಗುವ ಈ ಕೃತಿ ಮೂಲತಃ ಸಂಸ್ಕೃತದ 'ಶುಕ್ಲಾಂಬರಧರಂ'..ಶ್ಲೋಕಗಳನ್ನು ಸ್ವಂತಿಕೆಯೊಂದಿಗೆ ಕನ್ನಡೀಕರಿಸಿರುವುದಾಗಿದ್ದು, ಅತ್ಯುತ್ತಮವಾಗಿದೆ.

*'ಬಿಳಿಯುಡೆ ತುಂಬಿದ ತಿಂಗಳಬೆಳಗಾ*
*ತೊಳಗುವ ನಾಲಕು ತೋಳುಗಳ*
*ಬಲು ನಗೆಮೊಗ ವಿಷ್ಣು ನೆನೆವೆ*
*ಸುಲಭದಿ ಕಾರ್ಯವ ಗೈಸುವನೇ'*

ಲಕ್ಷ್ಮಿಸಮೇತವಾದ ಶ್ರೀಹರಿಯೊಬ್ಬನನ್ನೇ ಅವಲಂಬಿಸಿರುವುದು ಈ ಶ್ರೀವೈಷ್ಣವ ಕೀರ್ತನೆಗಳಲ್ಲಿ ದಟ್ಟವಾಗಿ ಕಾಣಿಸುತ್ತದೆ. ಸರ್ವದೈವಗಳನ್ನು ಸ್ತುತಿಸಿದರೂ ಅವುಗಳನ್ನೂ ಶ್ರೀಹರಿಯಿಂದ ನಿಯಮಿತರಾದ ದೇವತೆಗಳನ್ನಾಗಿಯೋ ಶ್ರೀಹರಿಯನ್ನೇ ಸ್ತುತಿಸುವ ದೇವತೆಗಳಾಗಿಯೋ ಚಿತ್ರಿಸಿರುವುದು ಇಲ್ಲಿಯ ವೈಶಿಷ್ಟ್ಯ.

'ಶಿವಸುತ', 'ಬ್ರಹ್ಮಪೂಜಿತ', 'ಅಜಪಿತ', 'ಶಂಕರಸೇವಿತ' ಎಂದೆಲ್ಲ ಶ್ರೀಹರಿಯನ್ನು ಇಲ್ಲಿ ಹೆಸರಿಸಲಾಗಿದೆ.

*'ತಾಯಿಲಕುಮಿ ತಂದೆನಾರಾಯಣ*
*ನಿಮ್ಮಯ ನೆಚ್ಚಿನ ಮಗ ನಾನಣ್ಣ'*

ಎಂಬುವ ಕೌಟುಂಬಿಕ ಚೌಕಟ್ಟಿನಲ್ಲಿಯೇ ಇಲ್ಲಿಯ ದಾಸರಿಗೆ ದೈವದೊಲವಿದೆ.

*'ಆಕಾರವಿಲ್ಲದ ಅನಾಬಿಯೊಳು ಪಂಥ*
*ಸಾಕಾರವಾಗಿಹನು ಶ್ರೀಲಕ್ಷ್ಮೀಕಾಂತ'*

ಎಂಬಂತಹ ಹರಿಏಕನಿಷ್ಠೆ ಎಲ್ಲ ಶ್ರೀವೈಷ್ಣವ ಹರಿದಾಸರಲ್ಲೂ ಕಂಡುಬರುತ್ತದೆ. ಆದರೂ ಬೇಲೂರು ವೈಕುಂಠದಾಸರು (ಶನೀಶ್ವರದಂಡಕ) ಅಹೋಬಲದಾಸರು ಶಾಮಶರ್ಮರು ಹಾಗೂ ಆಸೂರಿ ರಾಮಸ್ವಾಮಿದಾಸರಲ್ಲಿ ಸರ್ವದೇವತೆಗಳನ್ನು ಕುರಿತ ಸುಂದರವಾದ ಸ್ತುತಿರೂಪದ ಕೆಲವು ಕೀರ್ತನೆಗಳೂ ಇವೆ. ಅಷ್ಟೇ ಅಲ್ಲ, ಗುರುರಾಯ ರಾಘವೇಂದ್ರರು ಮತ್ತು ಆಧುನಿಕ ದೈ"ವ ಗುರುಶ್ರೀಸಾಯಿಬಾಬರನ್ನೂ ಕುರಿತು ಆಸೂರಿಯವರು ಕೀರ್ತನೆಗಳನ್ನು ರಚಿಸಿದ್ದಾರೆ. ಆದರೆ ಇವು ಶ್ರೀವೈಷ್ಣವೇತರ ಹರಿದಾಸರಲ್ಲಿ ಕಂಡುಬರುವಂತೆ ಶ್ರೀಹರಿಗೆ ಸಮಾನ ಅಥವಾ ಪರ್ಯಾಯ ದೇವತಾಸ್ತುತಿಗಳಾಗಿಲ್ಲ. ಬದಲು ಹರಿಏಕನಿಷ್ಠೆಗೇ ಬದ್ಧವಾಗಿ ಅವನ ಅಧೀನ ದೇವತೆಯಾಗಿ, ಅವನದೇ ಭಿನ್ನರೂಪವಾಗಿ ಕಲ್ಪಿಸಿರುವಂತಿದೆ. (ಆಸೂರಿಯವರು ತಮ್ಮ ಆರಾಧ್ಯದೈವವನ್ನೇ ಹರಿಹರ ಅಭೇದದಲ್ಲಿ ಸ್ವೀಕರಿಸಿದ್ದಾರೆ;'ಮಾಂಗಿರಿರಂಗ' ಹರಿಯೂ ಹೌದು ಹರನೂ ಹೌದು. ಅವನಿಗೆ ಸ್ಥಳಪುರಾಣದಲ್ಲೆ ಈ ಅಭೇದವಿದೆ. ಇದರ ಬಗ್ಗೆ ಇವರು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ.) ಸರ್ವದೇವೋಪಸಾನೆಯ ಇಂದಿನ ಆಧುನಿಕ ಸಾಮಾಜಿಕ ಸಂದರ್ಭದಲ್ಲಿ ಶ್ರೀವೈಷ್ಣವ ಹರಿದಾಸರ ಹರ ಮತ್ತು ಇತರ ದೇವತೆ - ಗುರುಗಳ ಸ್ತುತಿ ಅತ್ಯಂತ ಸಹಜವಾದುದಾಗಿದೆ. ಇದು ಸಾಮಾಜಿಕ

ಬದಲಾವಣೆಗೆ ಸ್ಪಂದಿಸಿರುವ ದಾಸರ ಸಮಕಾಲೀನ ಪ್ರಜ್ಞೆಯೂ ಆಗಿರುತ್ತದೆತಾದ್ದರಿಂದ ಇದನ್ನು ವಿಶಿಷ್ಟ ಲಕ್ಷಣವಾಗಿಯೇ ಪರಿಭಾವಿಸಿ, ತತ್ವದ ಬಗೆಗಿನ ಬಿಗಿ ನಿಲುವನ್ನು ಸಡಿಲಿಸುವ ಮೂಲಕ ಶ್ರೀವೈಷ್ಣವ ಕೀರ್ತನ ಸಾಹಿತ್ಯದಲ್ಲಿ ಧರ್ಮಸಮಾನತೆಯನ್ನು ಸಾಧಿಸಿದಂತಾಗಿದೆ ಎಂದು ಹೇಳಬಹುದಾಗಿದೆ.

*ಏನೋಬಂದಿಹುದು ಕೋಟಿ ಬಾಳುವ ನುಂಗಿಹದು   ಪ*

*ದೀನನಾಗಿ ಗುರುಧ್ಯಾನವ ಮಾಡಿ ಆದೆಯೊಳೀ ಬಹು*
*ಮಾನದಿ ಕಾಣುವುದೇನೋ  ಅ.ಪ.*

*ನಮ್ಮೊಳಿರಬಹುದು ಅದು ನಮ್ಮ ನಮ್ಮೊಳಿರಬಹುದು*
*ಹಮ್ಮುಗಳೆಂಬುವ ಹೆಮ್ಮೆಯನಳಿಯಲು*
*ಸುಮ್ ಮನೆ ಗಮ್ಮನೆ ಕಾಣಬರುತ್ತಿಹುದೇನೋ  ೧*

*ಅದಕ್ಕಿನ್ನೆಣೆಯಿಲ್ಲ ಅದನು ಗುರುಸೇವಕಬಲ್ಲ*
*ಮದನಜನಕ ಶ್ರೀತುಳಸೀರಾಮನ*
*ಪದಭಜನೆಯೊಳು ವುದಯಸಿ ತಾನೇ  ೨*

ಅಹೋಬಲದಾಸರ ಈ ಕೃತಿ ವಿಶಿಷ್ಟಾದ್ವೈತದ ಸಾಧಕನಿಗೆ ಒದಗುವ ಸಿದ್ಧಿಯನ್ನು ಅತ್ಯಂತ ಆಕರ್ಷಣೀಯವಾಗಿ ತಿಳಿಸುವ ಸರಳ ತತ್ವವಾಗಿ ಹೊರಹೊಮ್ಮಿದೆ.

ಕೇವಲ ಶ್ರೀವೈಷ್ಣವ ತತ್ವದ ದೃಷ್ಟಿಯಿಂದಷ್ಟೇ ಇವು ವಿಶಿಷ್ಟವಾಗುಳಿಯದೆ ಹರಿದಾಸ ಸಾಹಿತ್ಯ ಲಕ್ಷಣ ದೃಷ್ಟಿಯಿಂದಲೂ ವಿಶಿಷ್ಟತೆಯನ್ನು ಗಳಿಸುತ್ತವೆ. ಸಾಮಾಜಿಕವಾಗಿಯೂ ಸಮರ್ಥವಾಗಿಯೆ ಸ್ಪಂದಿಸುತ್ತವೆ. ಮತ, ಕುಲ, ಲೋಭತನಸದ, ಕಂದಾಚಾರ, ಕಪಟತನ, ಮೋಸ, ಸಂಬಂಧಗಳ ಮೌಲ್ಯಗಳು, ಭಾವನೆಗಳ ಮೌಲ್ಯಗಳು, ಹಣ, ಅಧಿಕಾರ, ಆಸೆ ಇತ್ಯಾದಿ ಎಲ್ಲ ಸಾಮಾಜಿಕ ಸಂಗತಿಗಳಿಗೂ ಇತರ ಹರಿದಾಸರಂತೆ ಇವರೂ ಸಹಜವಾಗಿ ಸ್ಪಂದಿಸಿದ್ದಾರಲ್ಲದೆ, ಜಾತ್ರೆ, ಬರಗಾಲ, ಕ್ಷಾಮ, ಖಾಯಿಲೆ, ಸ್ವಾತಂತ್ರ್ಯಹೋರಾಟ, ಚೀನಾ - ಪಾಕಿಸ್ತಾನದೊಂದಿಗಿನ ಯುದ್ಧ ಹೀಗೆ ಹಲವು ಸಮಕಾಲೀನ ಸಂಗತಿಗಳಿಗೂ ಪ್ರತಿಕ್ರಿಯಿಸಿದ್ದಾರೆ. ತಾವು ಬದುಕಿಗೆ ವಿಮುಖ ರಾಗಿದ್ದರೂ ತಮಗೆ ಕಾಣುವ ಸಮಾಜಜೀವನದ ಬದುಕು - ಬವಣೆ - ಬದಲಾವಣೆಗಳನ್ನೂ ಅದರ ಎಲ್ಲ ಸೂಕ್ಷ್ಮಗಳೊಂದಿಗೆ ಚಿತ್ರಿಸಿದ್ದಾರೆ. ಮೌಲ್ಯಗಳ ಕುಸಿತಗಳನ್ನೂ ಜೀವನ ಪರಿವರ್ತನೆಯನ್ನೂ ದಾಖಲಿಸಿದ್ದಾರೆ. ಶ್ರೀವೈಷ್ಣವ ಹರಿದಾಸರು ಇತರ ಹರಿದಾಸರಂತೆ ಕ್ಷೇತ್ರದರ್ಶನದ ಸ್ತುತಿಗಳನ್ನೂ ಸಾಂದರ್ಭಿಕ ಸನ್ನಿವೇಶಗಳ - ಸ್ಥಳೀಯ ಘಟನಾವಳಿಗಳ ಚಿತ್ರಣಗಳನ್ನೂ ತತ್ವಪದಗಳ ಧಾಟಿಯ ಕೃತಿಗಳನ್ನೂ ರಚಿಸಿದ್ದಾರೆ.

ಒಟ್ಟಾರೆ ಈ ಕೀರ್ತನಾಕಾರರ ಮುಖ್ಯ ವೈಶಿಷ್ಟ್ಯವಿರುವುದು ಶ್ರೀವೈಷ್ಣವ ತತ್ವಗಳನ್ನು ತಮ್ಮ ಕೀರ್ತನೆಗಳಲ್ಲಿ ಅಳವಡಿಸಿರುವುದರಲ್ಲಿ "ಕನ್ನಡ ಸಾಹಿತ್ಯದಲ್ಲಿ ಶ್ರೀವೈಷ್ಣವತತ್ವ ಪ್ರತಿಪಾದಿತವಾಗಿಲ್ಲ" ಎಂಬ ವಿಮರ್ಶಕರ ಹೇಳಿಕೆಗಳಿಗೆ ಇವು ಉತ್ತರವಾಗಿ ನಿಲ್ಲುವ ಸಾಮರ್ಥ್ಯ ಹೊಂದಿವೆ. "ರಾಮಾನುಜರು ಕರ್ನಾಟಕಕ್ಕೆ ಬಂದರೂ ಶ್ರೀವೈಷ್ಣವ ಸಂಪ್ರದಾಯದ ಭಕ್ತಿಪಂಥ ಕನ್ನಡ ಭಾಷೆಯಲ್ಲಿ ಆರಂಭವಾಗದುದೊಂದು ಸೋಜಿಗದ ಸಂಗತಿ. ಒಂದು ಪಕ್ಷ ಶ್ರೀವೈಷ್ಣವಭಕ್ತಿಪಂಥ ತನ್ನ ಅಭಿವ್ಯಕ್ತಿ ಮಾಧ್ಯಮವಾಗಿ ಕನ್ನಡವನ್ನು ಬಳಸಿಕೊಂಡಿದ್ದರೆ ಅದು ಯಾವ ಸ್ವರೂಪದಲ್ಲಿರುತ್ತಿತ್ತೋ, ವಚನ ಸಾಹಿತ್ಯಕ್ಕಿಂತ ಹೇಗೆ ಭಿನ್ನವಾಗಿರುತ್ತಿತ್ತೋ ಊಹಿಸುವುದು ಕಷ್ಟ" (ಕನಕದಾಸರ ಕೀರ್ತನೆಗಳು ಲೇಖನದಲ್ಲಿ, ಬೆಂ.ವಿ.ವಿ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಭಾಗ ೪ - ೨, ಪು.೪೯೦) ಎಂಬ ಹೇಳಿಕೆಗಳಿಗೆ ಈ ಕೀರ್ತನೆಗಳ ಮೂಲಕ ಉತ್ತರ ಸಿಕ್ಕಿದಂತಾಗಿದೆ. ರಾಮಾನುಜರು ಕರ್ನಾಟಕಕ್ಕೆ ಬಂದ ತಕ್ಷಣದಲ್ಲೇ ಇದು ಸಾಧ್ಯವಾಗದೇ ಹೋದರೂ ಕೇವಲ ೪೦೦ - ೫೦೦ ವರ್ಷಗಳ ಆನಂತರ ಬೇಲೂರು ವೈಕುಂಠದಾಸರು, ಕನಕದಾಸರು, ಲಕ್ಷ್ಮೀಶ

ಇವರುಗಳಲ್ಲಿ ಸಮರ್ಥವಾಗಿಯೇ ಕಾಣಿಸಿಕೊಂಡು ೧೮ - ೧೯ನೇ ಶತಮಾನದಲ್ಲಿ ದಟ್ಟವಾಗಿ ರೂಪುಗೊಂಡಿವೆ. ಕೀರ್ತನ ಸಾಹಿತ್ಯದಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡು ವೈವಿಧ್ಯಮಯವಾಗಿ ಸಂಪುಷ್ಟವಾಗಿ ಬೆಳೆದಿದೆ. ಕನ್ನಡ ಕೀರ್ತನ ಪರಂಪರೆಯಲ್ಲಿಯೇ ಒಂದು ವಿಶಿಷ್ಟ ಪರಿಭಾಷೆಯನ್ನು ರೂಢಿಸಿದೆ. ಬೇರೆ ಕೀರ್ತನ ಸಾಹಿತ್ಯದಲ್ಲಿ ಕಾಣಸಿಗದ ಹರಿಏಕನಿಷ್ಠೆ, ಪ್ರಪತ್ತಿ ಅಥವಾ ಶರಣಾಗತಿಮನೋಭಾವ, ಸರ್ವಸಮರ್ಪಣಸ್ಥಿತಿ, ಆತ್ಮ - ದೈವಕಲ್ಪನೆ ಮತ್ತು ಮೋಕ್ಷಗಳಿಗೆ ಹೊಸ ವ್ಯಾಖ್ಯಾನ, ಆಳ್ವಾರರು - ಆಚಾರ್ಯಸ್ತುತಿ ಸಮಾಜದ ಎಲ್ಲ ವರ್ಗದ ಸಹಭಾಗಿತ್ವ ಮುಂತಾದ ವಿಶೇಷ ಅಂಶಗಳ ಮೂಲಕ ಕನ್ನಡ ಕೀರ್ತನ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ.

**೭. ೧೯ನೇ ಶತಮಾನದಲ್ಲೊಂದು ಹರಿದಾಸ ಆಂದೋಲನ**

೧೯ನೇ ಶತಮಾನದ ಅಂತ್ಯಭಾಗದಲ್ಲಿ ೧೮೭೩ ರಿಂದ ೧೯೦೪ ರವರೆಗೆ ಕರ್ನಾಟಕದಲ್ಲಿ ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಕೋಲಾರದಿಂದ ಮೈಸೂರಿನವರೆಗೆ ಇಡೀ ದಕ್ಷಿಣ ಕರ್ನಾಟಕದಾದ್ಯಂತ ಸದ್ದಿಲ್ಲದೆ ಇನ್ನೊಂದು ಹರಿದಾಸ ಆಂದೋಲನವೇ ನಡೆದು ಹೋಗಿರುವುದು ಕಂಡು ಬರುತ್ತದೆದ.

ತುಳಸಿರಾಮದಾಸರೇ ಇದರ ಮೂಲ ಕೇಂದ್ರ. ಇವರ ಶಿಷ್ಯಪರಂಪರೆ ಬಹಳ ದೊಡ್ಡದಿದೆ. ಶಿಷ್ಯರು ಪ್ರಶಿಷ್ಯರೆಲ್ಲ ಸೇರಿ ನೂರಕ್ಕೂ ಅಧಿಕವಾಗುವ ಸಾಧ್ಯತೆಯಿದೆ. ಚನ್ನಪಟ್ಟಣದ ಅಹೋಬಲದಾಸರ ಮತ್ತು ಮಳಿಗೆ ರಂಗಸ್ವಾಮಿದಾಸರ ಹಾಡುಗಳು ಮಾತ್ರ ದೊರಕಿದೆ. ಉಳಿದ ಶಿಷ್ಯ ದಾಸರ ಹಾಡುಗಳಲ್ಲಿ ತುಳಸಿರಾಮದಾಸರನ್ನು ಸ್ತುತಿಸಿರುವ ಹಾಡುಗಳು ಮಾತ್ರ ಲಭ್ಯವಿದ್ದು ಇತರ ರಚನೆಗಳು ಅನುಪಲಬ್ಧವಾಗಿವೆ.

ಸಾಮಾಣ್ಯ ಜನವರ್ಗದಲ್ಲಿ ತುಳಸಿರಾಮದಾಸರು ಪವಾಡ ಸದೃಶ್ಯ ಕ್ರಾಂತಿಯನ್ನುಂಟು ಮಾಡಿದ್ದಾರೆ. ಗೌಡ, ಬಣಜಿಗ, ಗಾಣಿಗ, ಉಪ್ಪಾರ, ದರ್ಜಿ, ಅಕ್ಕಸಾಲಿಗ, ದಲಿತ - ಇತ್ಯಾದಿ ಎಲ್ಲರ ಮನೆ ಮನೆಗಳಲ್ಲಿ ದಾಸರ ಫೋಟೋ ಇಟ್ಟುಕೊಂಡು ದಾಸರ ಹಾಡು ಹೇಳಿಕೊಂಡು 'ಇವರಿಂದ ಜೀವನ ಕಂಡಿದ್ದೇವೆ. ಈ ಸ್ವಾಮಿಗಳನ್ನೇ ೨೪ ಗಂಟೆ ಧ್ಯಾನ ಮಾಡುತ್ತಿದ್ದೇವೆ'. ಎಂದು ಕೃತಕೃತ್ಯರಾಗಿರುವುದನ್ನು ದಕ್ಷಿಣ ಕರ್ನಾಟಕದಾದ್ಯಂತ ಕಾಣಬಹುದಾಗಿದೆ.

ವ್ಯಾಸರಾಯರ ಕಾಲದಲ್ಲಿನ ಕನಕದಾಸರೊಬ್ಬರನ್ನು ಬಿಟ್ಟರೆ ಬೇರೆ ಯಾವ ವೈದಿಕೇತರ ಹರಿದಾಸರೂ ಇಡೀ ಹರಿದಾಸ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ. ಈವರೆಗೆ ಇದು ವೈದಿಕ ಸಮಾಜದಲ್ಲೇ ನಡೆದಿರುವ ಆಂದೋಲನವಾಗಿತ್ತು. ಆದರೆ ತುಳಸಿರಾಮದಾಸರ ಕಾಲದಲ್ಲಿ ವೈದಿಕೇತರ ಸಮಾಜವನ್ನೇ ಕೇಂದ್ರವಾಗಿಟ್ಟುಕೊಂಡು ಯಶಸ್ವೀ ಆಂದೋಲನ ನಡೆದಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ತುಳಸಿ ರಾಮ ದಾಸರು ದಕ್ಷಿಣ ಕರ್ನಾಟಕದಾದ್ಯಂತ ಸಂಚರಿಸಿ ಎಲ್ಲ ಪ್ರಮುಖ ಸ್ಥಳಗಳಲ್ಲೂ ಶ್ರೀಮಂತ ಭಕ್ತಾದಿಗಳನ್ನು ಸೆಳೆದು ಅವರಲ್ಲಿ ಧಾರ್ಮಿಕ ಚಿಂತನೆಯನ್ನು ಬಿತ್ತುವ ಮೂಲಕ ಸಮಾಜಸೇವಾ ಮನೋಭಾವವನ್ನು ಮೂಡಿಸಿ ಭಾರ್ಗವರಾಮ (ಬಾರಾಮಾರ್ಗ) ಭಜನ ಮಂದಿರಗಳನ್ನು ಕಟ್ಟಿಸಿ ಅನೂಚಾನವಾಗಿ ಧಾರ್ಮಿಕ - ಸಾಮಾಜಿಕ ಕಾರ್ಯಗಳು ನಡೆದುಕೊಂಡು ಹೋಗುವಂತೆ ಮಾಡಿದ್ದಾರೆ. ಭಜನೆ, ರಾಮೋತ್ಸವ, ಕೃಷ್ಣೋತ್ಸವ, ರಾಮಕೋಟಿ (ಅಖಂಡ ಭಜನೆ) ಹರಿಕಥೆ ಇತ್ಯಾದಿ ಗಳನ್ನು ರೂಢಿಗೆ ತಂದಿದ್ದು ಇವು ಇಂದಿಗೂ ನಡೆದುಕೊಂಡು ಬರುತ್ತಿವೆ. ಇವರ ಶಿಷ್ಯಕೋಟಿಯಲ್ಲಿ ಗೌಡ, ಬಣಜಿಗ, ಇತ್ಯಾದಿ., ಸಮಾಜದ ಎಲ್ಲ ವರ್ಗದವರೂ ಕಂಡುಬಂದಿದ್ದು ಅನೇಕರು ಹರಿದಾಸರಾಗಿ ಹಾಡುಗಳನ್ನು ರಚಿಸಿದ್ದಾರೆ. ತುಳಸಿರಾಮ ದಾಸರ ಮೇಲೆ ૩೦ ಕ್ಕೂ ಹೆಚ್ಚು ಜನ ಶಿಷ್ಯದಾಸರು ಕೀರ್ತನೆಗಳ ರಚನೆ ಮಾಡಿದ್ದಾರೆ. ಮೈಸೂರು ಮಹಾರಾಜರಾದಿಯಾಗಿ ಪರಕಾಲ ಮಠವನ್ನೂ ಒಳಗೊಂಡು ಆಕಾಲದ ವೈದಿಕಗಣ್ಯರನೇಕರೂ ತುಳಸಿರಾಮದಾಸರನ್ನು ಮುಕ್ತಕಂಠದಿಂದ ಸ್ತುತಿಸಿದ್ದಾರೆ.

ಕನಕದಾಸರಿಗೆ ಸರಿಸಾಟಿಯಾಗುವ; ಶಿಶುನಾಳ ಶರೀಫರನ್ನು ಮೀರಿಸುವ; ತತ್ವಪದಗಳನ್ನು ರಚಿಸಿರುವ; ಜಾವಳಿಗಳಂತಹ ವಿಶಿಷ್ಟ ಕೀರ್ತನೆಗಳನ್ನು ನೀಡಿರುವ ಚನ್ನಪಟ್ಟಣದ ಅಹೋಬಲದಾಸರು ಬಣಜಿಗರು. ಮುಳಬಾಗಿಲಿನ ರಂಗಸ್ವಾಮಿ ದಾಸರು ಗಾಣಿಗರು,

ಕೋಲಾರದ ಚೆಂಚುದಾಸರು ದಲಿತರು, ಶ್ರೀರಂಗಪಟ್ಟಣದ ಸಮೀಪದ ದರಿಶಕುಪ್ಪದ ಕೃಷ್ಣದಾಸರು ಗೌಡರು, ಆಲಂಗೂರಿನ ಅಪ್ಪಾಜಿದಾಸರು ರೆಡ್ಡಿಗರು, ಚಿಂತಾಮಣಿಯ ಶ್ರೀನಿವಾಸದಾಸರು ಉಪ್ಪಾರರು, ಮೈಸೂರಿನ ಬೈರೇಗೌಡ ದಾಸರು ಒಕ್ಕಲಿಗರು - ಹೀಗೆ ಸಮಾಜದ ಎಲ್ಲ ಜನವರ್ಗದಿಂದ ಬಂದಿರುವ ಹರಿ ದಾಸರು ಈ ಶಿಷ್ಯಕೋಟಿಯಲ್ಲಿದ್ದಾರೆ. 'ಶಂಕರದಾಸರು' ಅಂಕಿತದಿಂದ ಪ್ರಸಿದ್ಧವಾಗಿದ್ದ ಮೈಸೂರಿನ ಪ್ರಸಿದ್ಧ ಅದ್ವೈತಿಗಳಾದ ವೇದಾಂತ ಶಿವರಾಮಶಾಸ್ತ್ರಿಗಳು ಇವರಿಂದ ವೇದಾಂತ ವಿಷಯ ತಿಳಿದವರಾಗಿ ಇವರ ಶಿಷ್ಯರೆನಿಸಿಕೊಂಡು ಗುರುಸ್ಥಾನದಲ್ಲಿ ಸ್ತುತಿಸುತ್ತಾರೆ.

ಹೀಗೆ ಎಲ್ಲಿ ಜನವರ್ಗದಲ್ಲೂ ತುಳಸಿರಾಮದಾಸರು ವಿದ್ಯುತ್ ಸಂಚಾರವನ್ನುಂಟುಮಾಡಿ, ಜಾಗೃತಿಯನ್ನು ಮೂಡಿಸಿದ್ದಾರೆ. ಸ್ವಾತಂತ್ರ್ಯದ ಅಸ್ಥಿರತೆ, ಸಾಮಾಜಿಕ ಅರಾಜತೆ, ಕ್ಷಾಮ ಬರ, ಯುದ್ಧಬೀತಿಗಳಿಂದ ನಲುಗಿದ್ದ ಜನರಲ್ಲಿ ಮಾನಸಿಕ ಶಾಂತಿಯನ್ನು, ಜೀವನದ ನಿರ್ದಿಷ್ಟ ಗುರಿಯನ್ನು, ಸಾಮಾಜಿಕ ಬದ್ಧತೆಯನ್ನು ಮೂಡಿಸುವಲ್ಲಿ ತುಳಸಿರಾಮದಾಸರು ಅಪಾರವಾಗಿ ಶ್ರಮಿಸಿದ್ದಾರೆ. ಧನಿಕರಿಂದ ದಾನಧರ್ಮಗಳನ್ನು ಮಾಡಿಸಿದ್ದಾರೆ. ನೊಂದವರಿಗೆ - ರೋಗಿಗಳಿಗೆ ಆರೈಕೆ ಮಾಡುವ ಆರೋಗ್ಯ ಶಿಬಿರಗಳನ್ನು ನಡೆಸಿ ಸಮಾಜದಲ್ಲಿ ಸ್ವಾಸ್ಥ್ಯವನ್ನು ಕಾಪಾಡಿರುವ ನಿಜವಾದ ಭವರೋಗ ವೈದ್ಯರೆನಿಸಿದ್ದಾರೆ. ಆಗಿನ ಕಾಲದ ಕ್ರಿಶ್ಚಿಯನ್ ಮಿಷನರಿಗಳಿಂದ ನಡೆಯುತ್ತಿದ್ದ ಮತಾಂತರದ ಹಾವಳಿಯನ್ನು ತಗ್ಗಿಸುವಲ್ಲಿ, ಹಿಂದುತ್ವವನ್ನು ಕಾಪಾಡುವಲ್ಲಿ ಜನರಲ್ಲಿ ಬದುಕಿನ ಬಗೆಗೆ ಆಸಕ್ತಿ ಮತ್ತು ನೈತಿಕ ಜಾಗೃತಿಯನ್ನುಂಟು ಮಾಡುವಲ್ಲಿ ತುಳಸಿರಾಮದಾಸರ ಆಂದೋಲನ ಮುಖ್ಯವಾಗುತ್ತದೆ. ಅದಕ್ಕಾಗಿಯೇ ಇಂದಿಗೂ ಜನಮನದಲ್ಲಿ ಶಾಶ್ವತವಾಗುಳಿದಿದ್ದಾರೆ. ಇವರ ಶಿಷ್ಯ ಪರಂಪರೆ ಇಂದಿಗೂ ಮುಂದುವರೆದಿದ್ದರೂ ಆಧುನಿಕತೆಯ ಅಬ್ಬರದಲ್ಲಿ ಗುಪ್ತಗಾಮಿನಿಯಾಗಿದ್ದಾರೆ, ಮುಳಬಾಗಿಲಿನಲ್ಲಿ ಮತ್ತು ಬೆಂಗಳೂರಿನಲ್ಲಿ ಇವರ ಹೆಸರಿನ ಮಠ ಮತ್ತು ದೇವಾಲಯಗಳೇ ಇವೆ.

ಕೇವಲ ನೂರು ವರ್ಷಗಳಹಿಂದೆ ಇವರು ನಡೆಸಿದ ಈ ಸಾಮಾಜಿಕ - ಧಾರ್ಮಿಕ ಹರಿದಾಸ ಆಂದೋಲನವು ಇತಿಹಾಸದಲ್ಲಿ ಸರಿಯಾದ ರೀತಿಯಲ್ಲಿ ದಾಖಲಾಗಬೇಕಾಗಿದೆ.

**೮. ಸಮಾರೋಪ**

ಒಟ್ಟಾರೆ ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತವೂ ನಿಚ್ಚಳವಾಗಿ ಸೇರಿಕೊಂಡಿದ್ದು ಅದಕ್ಕೊಂದು ಪರಂಪರೆಯೇ ನಿರ್ಮಾಣವಾಗಿರುವುದೂ ಸ್ವಯಂ ಸ್ಪಷ್ಟವಾಗಿದೆ. ಕನ್ನಡ ಸಾಹಿತ್ಯ ಅಧ್ಯಯನಾಸಕ್ತರು ಈ ನಿಟ್ಟಿನಲ್ಲಿ ಕನ್ನಡ ಹರಿದಾಸ ಸಾಹಿತ್ಯ ಚರಿತ್ರೆಯನ್ನು ಪುನರಧ್ಯಯನಕ್ಕೆ ಒಳಪಡಿಸಬೇಕಾಗಿದೆ. ೪ನೇ ಘಟ್ಟದವರೆಗೆ ಮಾತ್ರ ಗುರುತಿಸಲ್ಪಟ್ಟಿದ್ದ ಕೀರ್ತನ ಸಾಹಿತ್ಯಚರಿತ್ರೆಗೆ ಇನ್ನುಮುಂದೆ ಅದು ಐದನೇ ಘಟ್ಟವೊಂದನ್ನು ಗುರುತಿಸಿಕೊಂಡಿರುವುದನ್ನೂ ಮತ್ತು ಈ ಘಟ್ಟದಲ್ಲಿ ದ್ವೈತ - ಅದ್ವೈತ - ವಿಶಿಷ್ಟಾದ್ವೈತ ಈ ಮೂರೂ ತತ್ವಗಳ ಕೀರ್ತನೆಗಳೂ ಸರಿಸಮನಾಗಿ ಬೆಳೆದಿರುವುದನ್ನು ಹಾಗೂ ಒಂದು ಯಶಸ್ವಿ ಹರಿದಾಸ ಆಂದೋಲನವೇ ನಡೆದಿರುವುದನ್ನೂ ಈ ಮೂಲಕ ವೈದಿಕೇತರವರ್ಗದವರನ್ನೂ ಈ ಹರಿದಾಸ ಸಾಹಿತ್ಯ ಒಳಗೊಂಡಿರುವುದನ್ನೂ ನೂತನವಾಗಿ ಸೇರಿಸಿಕೊಂಡು ಅಧ್ಯಯನಮಾಡ ಬೇಕಾದ ಅವಶ್ಯಕತೆಯಿದೆ.

ಭಕ್ತರಿಗೆ ಕರಿಗಡುಬು ಊಟ ಹಾಕಿಸುತ್ತಿದ್ದರೆಂದೂ ಅಲ್ಲಿಯ ಪುಷ್ಕರಿಣಿಯಲ್ಲಿ ದೊರೆತ ಚಂದನದ ವೆಂಕಟೇಶ್ವರನನ್ನು ತಮ್ಮೂರಿಗೆ ಲಕ್ಷದೀಪೋತ್ಸವದ ಜ್ಯೋತಯೊಂದಿಗೆ ತಂದು ಆರದಂತೆ ಪೋಷಣೆ ಮಾಡುತ್ತಿದ್ದರೆಂದೂ ಇನ್ನೊಬ್ಬ ಅಣ್ಣಯ್ಯ ದಾಸರ ಬಗೆಗೂ ಡಾ|| ನೀ. ಕೃ.ರಾಮಶೇಷನ್ ಮತ್ತು ಇತರರು ಹೇಳುತ್ತಾರೆ.

ಹಾಗೆಯೇ ಮೇಲುಕೋಟೆಯ ಯತಿರಾಜಮಠದ ಸ್ವಾಮಿಗಳೊಬ್ಬರು 'ದೊಡ್ಡಯ್ಯಾಚಾರ್ಯ'ರೆನ್ನುವವರು ತಿರುನಾರಾಯಣನನ್ನು ಸೇವಿಸುತ್ತ ಅವಧೂತರಂತೆ ಸಂಚರಿಸುತ್ತಿದ್ದರೆಂದೂ ಇನ್ನೊಂದು ಮಾಹಿತಿಯಿದೆ. ದೇವಾಲಯದಲ್ಲಿ ಅನೇಕ ತಮಿಳು ಪಾಶುರಗಳನ್ನೂ ಆಶುಗೀತೆಗಳನ್ನೂ ಹಾಡುತ್ತಿದ್ದರೆಂದೂ ಇವರ ಬಗ್ಗೆ ಪ್ರತೀತಿಯಿದೆ.

ಬೆಂಗಳೂರಿನಲ್ಲೂ ಮಲ್ಲೇಶ್ವರದ ರಸ್ತೆಗಳಲ್ಲಿ ಒಬ್ಬ ಅವಧೂತರು ಊರ್ಧ್ವಪುಂಡ್ರಧಾರಿಗಳಾಗಿ ತುಂಡುಪಂಚೆ ಬೈರವಾಸದಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದುದನ್ನು ನಾನು ಬಾಲಕನಾಗಿದ್ದಾಗ ನೋಡಿದ್ದುಂಟೆಂದು ಸು.೮೦ ವರ್ಷದ ಬೆಳಗೆರೆ ಕೃಷ್ಣ ಶಾಸ್ತ್ರಿಗಳು ನೆನಪಿಸಿಕೊಳ್ಳುತ್ತಾರೆ. ಇವರು ತಮಗೆತಾವೇ ಹಾಡುಗಳನ್ನು ಹಾಡಿಕೊಳ್ಳುತ್ತ ಅಂತರ್ಮುಖಿಗಳಾಗಿರುತ್ತಿದ್ದರೆಂದೂ ಲೌಕಿಕ ವ್ಯವಹಾರದ ಗೊಡವೆ ಅವರಿಗಿರಲಿಲ್ಲವೆಂದೂ ಶಾಸ್ತ್ರಿಗಳು ಹೇಳುತ್ತಾರೆ. ಮೇಲುಕೋಟೆಯ ಮಠದ ಶಾಖೆ ಮಲ್ಲೇಶ್ವರದಲ್ಲೇ ಇದ್ದು ಈ ಅವಧೂತರು ಮೇಲುಕೋಠೆಯ ದೊಡ್ಡಯ್ಯಾಚಾರ್ಯರೇ ಆಗಿದ್ದಿರಲೂ ಬಹುದು.

ಒಟ್ಟಾರೆ ಈ ಮೂವರು ಬಡಅಣ್ಣಯ್ಯಾಚಾರ್ಯರಲ್ಲಿ ಯಾರು ಹರಿದಾಸರಾಗಿ ಕೀರ್ತನೆಗಳನ್ನು ರಚಿಸಿದವರೆಂಬುದನ್ನು ನಿರ್ಧರಿಸಬೇಕಾದ ಅಗತ್ಯವಿದೆ. ದೊರೆತಿರುವ ನಾಲ್ಕು ಕೀರ್ತನೆಗಳಲ್ಲಿ ಒಂದು ಉರ್ದುಗೀತೆಯಾಗಿರುವುದರಿಂದ ಸವಣೂರಿನ ನವಾಬನೊಂದಿಗೆ ಸಂಬಂಧವಿದ್ದ ಬಡಣ್ಣಾಚಾರ್ಯರೇ ಹರಿದಾಸರಾಗಿರುವುದು ಬಹುಪಾಲು ಖಚಿತವೆನಿಸುತ್ತದೆ. ಸವಣೂರಿನ ನವಾಬನ ಕಾಲದ ಖಂಡೇರಾವ್ ನೊಂದಿಗೆ ಈ ದಾಸರ ಸಂಬಂಧ ಗುರುತಿಸಿರುವುದರಿಂದ ಈತನ ಕಾಲ ಹೈದರಾಲಿಯ ಕಾಲಕ್ಕೆ ಹೊಂದುತ್ತದೆ. ಹೈದರಾಲಿಯು ಸವಣೂರ ನವಾಬನೊಂದಿಗೆ ವೈವಾಹಿಕ ಸಂಬಂಧ ಬೆಳೆಸಲು ಈ ಖಂಡೇರಾಯನೇ ಕಾರಣನೆಂದೂ ಮುಂದೆ ಕಾರಣಾಂತರ ದಿಂದ ಇವನೊಂದಿಗೆ ಮನಸ್ತಾಪವುಂಟಾಗಿ ಹೈದರಾಲಿಯು ಇವನನ್ನು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಟ್ಟಿದ್ದನೆಂದೂ ಇತಿಹಾಸದಲ್ಲಿ ಇವನ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಘಟನೆ ಕ್ರಿ.ಶ. ೧೮೦೦ರ ಸರಿಸುಮಾರಿನಲ್ಲಿ ಬರುವುದರಿಂದ ಈ ಕಾಲದಲ್ಲಿದ್ದರೆಂದು ಬಡಣ್ಣಾಚಾರ್ಯರ ಕಾಲವನ್ನು ಊಹಿಸಬಹುದಾಗಿದೆ.

ಇವರ ಸ್ಥಳವನ್ನು ಕೆಲವರು ಬೆಂಗಳೂರು ಜಿಲ್ಲೆಯ ಕಲ್ಕುಂಟೆ (ಹೊಸಕೋಟೆ ತಾ||) ಎಂದು ಹೇಳುತ್ತಿದ್ದುದರಿಂದ ಪರಿಶೀಲಿಸಲಾಗಿ ಇಂಥ ಅವಧೂತರು ಅಲ್ಲಿ ಇದ್ದುದರ ಬಗ್ಗೆ ಯಾವ ಮಾಹಿತಿಯೂ ಲಭ್ಯವಾಗಿಲ್ಲ. ದೊರೆತಿರುವ ಕೀರ್ತನೆಗಳಲ್ಲೂ ಇವರ ಇತಿವೃತ್ತದ ಬಗ್ಗೆ ಯಾವ ಮಾಹಿತಿಯೂ ಸಿಕ್ಕುವುದಿಲ್ಲ. ಅಷ್ಟೇ ಅಲ್ಲ ಇವರ ಮತದ ಬಗೆಗೂ ಖಚಿತವಾಗಿ ಹೇಳಲಾಗುತ್ತಿಲ್ಲ. ಸಂತೆಬಿದನೂರಿನ ಆಂಜನೇಯನನ್ನು ಸ್ತುತಿಸಿರುವ ಕೀರ್ತನೆಯಲ್ಲಿ, ('ವೀರಹನುಮ ಬಹುಪರಾಕ್ರಮ ಸುಜ್ಞಾನವಿತ್ತು ಪಾಲಿಸೆನ್ನ ಜೀಔರೋತ್ತಮ') 'ಮಧ್ವಗೇಹದಲ್ಲಿ ಜನಿಸಿ' ಎಂಬ ಉಲ್ಲೇಖ ಇರುವುದರಿಂಧ ಇವರ ಮುದ್ರಿಕೆಯಲ್ಲಿ 'ವಿಠಲ' ಅಂಕಿತವಿರುವುದರಿಂದ ಇವರು ಮಾಧ್ವ ಸಂಪ್ರದಾಯದವರಾಗಿರುವ ಸಾಧ್ಯತೆಯೂ ಉಂಟು. ಹಾಗೆಯೇ, ತತ್ತ್ವಪದದಂತೆ ಸಾಗುವ 'ದಾವಾದಾರದ ದುರ್ವಿಷಯದಿ ನೀ ಮುಳುಗಿ ಹರಿಯುತಿದಿ' ಎಂಬ ಕೃತಿಯಲ್ಲಿ

*'ದೃಷ್ಟಿ ಒಬ್ಬನಲ್ಲಿಟ್ಟರೆ ಜಗದಲಿ ಕಷ್ಟಾಹುದೆ ನೋಡ'*
*ಥಟ್ಟನೆ ಈ ಭವನಷ್ಟಾಂಗವ ಹಾಂಗಿಷ್ಟು ಮಾಡೊ ಮೂಢ'*

ಎಂದು ಹೇಳಿರುವಲ್ಲಿ ಶ್ರೀಹರಿ ಏಕನಿಷ್ಠೆಯಿರುವಂತೆ ಕಂಡುಬರುವುದರಿಂದ ಮತ್ತು ಹಲವರು ಇವರನ್ನು ಊರ್ಧ್ವಪುಂಡ್ರಧಾರಿಗಳಾಗಿದ್ದ ಶ್ರೀವೈಷ್ಣವ ಆಚಾರ್ಯರೇ ಎಂದು ಹೇಳುತ್ತಿರುವುದರಿಂದ ಸದ್ಯಕ್ಕೆ ಶ್ರೀವೈಷ್ಣವ ಸಂಪ್ರದಾಯದಲ್ಲಿ ಗುರುತಿಸಲಾಗಿದೆ. ಒಟ್ಟಾರೆ ಇವರ ಬಗ್ಗೆ ಖಚಿತ ಮಾಹಿತಿ ಲಭ್ಯವಾಗುವವರೆಗೆ ಏನನ್ನೂ ಹೇಳಬರುವುದಿಲ್ಲ.

**(ಆ) ಕೀರ್ತನೆಗಳ ಪರಿಚಯ**

ಲಭ್ಯವಿರುವ ನಾಲ್ಕು ಕೀರ್ತನೆಗಳನ್ನಷ್ಟೇ ಇಟ್ಟುಕೊಂಡು ಕೀರ್ತನೆಗಳ ಬಗ್ಗೆ ಏನನ್ನೂ ಹೇಳಲು ಸಾಧ್ಯವಾಗದಾದರೂ ಸಿಕ್ಕಿರುವ ಕೃತಿಗಳೆಲ್ಲ ಶ್ರೀಹರಿಸ್ತುತಿಯಾಗಿ ಮಾತ್ರ ಕಂಡು ಬಂದಿವೆ.

*ಮನದಿ ನಿನ್ನ ತಪವ ಮಾಡಿಸೊ ಮಾಧವ*
*ಅನುದಿನದಲದನೆ ಬಯಸುವೆ ಯಾದವ*

ಕೃತಿಯಲ್ಲಿ ಶ್ರೀವೈಷ್ಣವ ತತ್ವವಾದ ಶ್ರೀಹರಿಏಕನಿಷ್ಠೆಯೇ ಕಂಡುಬರುತ್ತದೆ.

*ನಿನ್ನಿಂದಲೇ ಸೃಷ್ಟಿ ನಿನ್ನಿಂದಲೇ ಸ್ಥಿತಿಯು*
*ನಿನ್ನಿಂದಲೇ ಪ್ರಳಯ ನಿಯಮಗಳು*
*ನಿನ್ನಿಂದಲೇ ಜ್ಞಾನ ನಿನ್ನಿಂದಲಜ್ಞಾನ*
*ನಿನ್ನಿಂದಲೇ ಬಂಧ ಮೋಕ್ಷವೆಂಬ ವಿಧ*

ಎಂಬುದೂ ಆ ತತ್ತ್ವಕ್ಕೆ ಪೂರಕವಾಗಿಯೇ ಇದೆ. ಇದರಲ್ಲೇ ಬರುವ 'ಕೃಷ್ಣ ದಯಮಾಡಿ ನೀ ಪೇಳಿದಂತೆ'.. 'ಭವಭೀತಿ ಹರಿಸಲು ಕೃಪಾಮಯ ವಿಠಲವ್ಯಾಸ ವಿಧಿ ಒಂದೇ ವಿಭುವೇ' ಎಂಬ ಮಾತಿನಲ್ಲಿ ಭಗವದ್ಗೀತೆಯಿಂದ ಶ್ರೀವೈಷ್ಣವ ತತ್ವ ಸ್ವೀಕರಿಸಿರುವ 'ಶರಣಾಗತಿಯ' ಚರಮಶ್ಲೋಕದ ಸಂದೇಶವನ್ನೇ ಹೇಳುವಂತಿದೆ.

'ದಾವಾದಾರದ ದುರ್ವಿಷಯದಿ ನೀ'. - ಕೃತಿ ಸೊಗಸಾದ ತತ್ವಪದವಾಗಿದೆ. ಲಯಬದ್ಧವಾಗಿ ಛಂದೋ ಬದ್ಧವಾಗಿ ಮತ್ತು ಅತ್ಯಂತ ಸಹಜವಾಗಿ ರಚನೆಯಾಗಿರುವ ಈ ಕೃತಿಗಳನ್ನು ನೋಡಿದರೆ ಬಡಣ್ಣಯ್ಯಾಚಾರ್ಯರ ಇತರ ಕೃತಿಗಳೂ ಇದೇ ಧಾಟಿಯಲ್ಲಿದ್ದರಿಬಹುದೆನಿಸುತ್ತದೆ. ಅವೆಲ್ಲ ದೊರೆತಲ್ಲಿ ಕೀರ್ತನಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಬಲ್ಲವು ಎಂದೆನಿಸದಿರದು.

ವಿಜಯದಾಸರ ಶಿಷ್ಯಪರಂಪರೆಗೆ ಸೇರಿದ ಕಲ್ಲೂರು ಸುಬ್ಬಣ್ಣನವರದೇ ಆಗಿರುವ ಸಾಧ್ಯತೆಯೂ ಇದೆ. ಆದ್ದರಿಂದ ಸಂಗ್ರಹ ಮಾಡುವವರು ಈ ಅಂಶವನ್ನೂ ಗಮನಿಸಬೇಕಾಗುತ್ತದೆ.

* * *